ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಮಂಗಳವಾರ 19ನೇ ಸೆಪ್ಟೆಂಬರ್ 1995 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11.30 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : **(ಶ್ರೀ ರಮೇಶ ಕುಮಾರ್)**

ಅವರು ಪೀಠವನ್ನು ಅಲಂಕರಿಸಿದ್ದರು.

ಮಾನ್ಯ ವಿರೋಧಪಕ್ಷದವರು (ಬಿ.ಜೆ.ಪಿ ಮತ್ತು ಕಾಂಗ್ರೇಸ್) ಸಭೆಗೆ ಬರದೆ ಇರುವುದು ಹಾಗೂ ಸಭೆಯನ್ನು ನಡೆಸಬೇಕೆಂದು ಇತರೆ ಸದಸ್ಯರ ಒತ್ತಯ.

+ ಶ್ರೀ ಜೆ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಸಭಾಧ್ಯಕ್ಷರೇ, ದಯಮಾಡಿ ನಮಗೆ ಸಭೆಯು ನಡೆಯಬೇಕು. ಎರಡು ವಿರೋಧ ಪಕ್ಷಗಳು ಸಭೆಗೆ ಬರಲಿಲ್ಲವೆಂದು ಹೇಳಿ ಅಧ್ಯಕ್ಷರು ನಿನ್ನೆಯಿಂದ ಸಭೆಯನ್ನು ಮುಂದೂಡುತ್ತಾ ಬಂದಿದ್ದಾರೆ. ಆದರೆ ನಾವು ಕೂಡ ಬೇರೆ ವಿರೋಧ ಪಕ್ಷದವರೆ, ನಾವು ಬೇರೆ ವಿರೋಧಪಕ್ಷದ್ದು 4-5 ಜನ ಸದಸ್ಯರುಗಳು ಇದ್ದೇವೆ. ನಾಳೆ ದಿವಸ ನಾವೇನಾದರೂ ಈ ರೀತಿಯಾಗಿ ಬಹಿಷ್ಕಾರ ಹಾಕಿದರೆ ನೀವು ಇದೇ ರೀತಿ ಸಭೆಯನ್ನು ನಡೆಸದೇ ಮುಂದೂಡುತ್ತೀರಾ ಎನ್ನತಕ್ಕಂಥ ಒಂದು ವಿಷಯ ನಮಗೆ ಸ್ಪಷ್ಟವಾಗಬೇಕು. ಮತ್ತೆ 4-5 ದಿವಸಗಳಿಂದ ಸದನವನ್ನು ನಡೆಯದ ಹಾಗೆ ಈ ರೀತಿಯಾಗಿ ತಡೆ ಹಿಡಿದು ಚರ್ಚೆಯಾಗಬೇಕಾದಂತಹ ಬಹಳ ಪ್ರಾಮುಖ್ಯವಾದಂತಹ ವಿಷಯಗಳು ಇದ್ದಂತಹ ಕಾಲದಲ್ಲಿಯೂ ಕೂಡ, ಚರ್ಚೆಯಾಗಲಿಕ್ಕೆ ಅವಕಾಶ ಇಲ್ಲದಂತಹ ಸಂದರ್ಭವನ್ನು ನಾವು ಇಲ್ಲಿ ಕಾಣುತ್ತಿದ್ದೇವೆ. ಇಲ್ಲಿ ನಿಜವಾಗಲೂ ಕೂಡ ಈ ಸದನದ ಗೌರವಕ್ಕೆ ಸ್ಥಾನಮಾನಕ್ಕೆ ಶೋಭೆಯನ್ನು ತರತಕ್ಕಂಥದ್ದು ಅಲ್ಲ. ಆದ್ದರಿಂದ ನಾವು ತಮ್ಮಲ್ಲಿ ಮನವಿಯನ್ನು ಮಾಡುತ್ತಿದ್ದೇವೆ. ಒಂದು ರೀತಿಯಲ್ಲಿ ನಾವು ರಾಜಕೀಯ ಪಕ್ಷದವರು. ನಮ್ಮ ಪಕ್ಷಗಳಿಗೂ ಕೂಡ, ನಮ್ಮ ದೃಷ್ಟಿಯಲ್ಲಿ ತಾರತಮ್ಯವನ್ನು ಕಾಣುತ್ತಿದ್ದೇವೆ. ಅವರು ಮೇಜರ್ ಪಾರ್ಟೀಸ್ ಎಂದು ಹೇಳಿ ಅವರಿಬ್ಬರು ಬಹಿಷ್ಕಾರವನ್ನು ಹಾಕಿದ ತಕ್ಷಣ ಈ ಸಭೆ ನಡೆಯುವುದು ಬೇಡ ಎಂದು ಹೇಳಿದರೆ ? ನಾವು ಕಡಿಮೆ ಸಂಖ್ಯೆಯಲ್ಲಿರುವ ಕಾರಣದಿಂದ ನಾವು ನಾಳೆ ದಿವಸ ನಾವು ಸಹ ಯಾವುದಾದರೂ ಒಂದು ಕಾರಣದಿಂದ ಬಹಿಷ್ಕಾರ ಹಾಕಿದರೆ ಇದೇ ರೀತಿ ತಾವು ಸದನವನ್ನು ಮುಂದೂಡಿಕೊಂಡು ಹೋಗಲಿಕ್ಕೆ ಸಾಧ್ಯವಾಗುತ್ತದೆಯೇ ಎನ್ನತಕ್ಕಂಥದ್ದನ್ನು ಸ್ಪಷ್ಟಪಡಿಸಬೇಕು. ಮತ್ತೆ ಈಗ ಹಲವಾರು ವಿಷಯಗಳು ಇಲ್ಲಿ ಪ್ರಸ್ತಾಪವಾಗಬೇಕಾಗಿದೆ ಮತ್ತು ಚರ್ಚೆಯಾಗಬೇಕಾಗಿದೆ. ನಾವು ನಿನ್ನೆಯಿಂದ ಕಾದು ಕಾದು ಸಭೆಯು ನಡೆಯದೇ ಇರತಕ್ಕಂತಹ ಪರಿಸ್ಥಿತಿ ಬಂದಿದೆ. ಆದ್ದರಿಂದ ತಮ್ಮಲ್ಲಿ ನಾವು ವಿನಂತಿಯನ್ನು ಮಾಡುತ್ತಿದ್ದೇವೆ.

ತಾವು ದಯವಿಟ್ಟು ಸದನವನ್ನು ನಡೆಯಲಿಕ್ಕೆ ಅವಕಾಶವನ್ನು ಮಾಡಿಕೊಡಬೇಕು, ತಾವು ಸದನವನ್ನು ನಡೆಯಲಿಕ್ಕೆ ಅವಕಾಶವನ್ನು ಮಾಡಿಕೊಡದೇ ಇದ್ದರೆ ನಾವು ಕೂಡ ಇನ್ನೊಂದು ಕ್ರಮವನ್ನು ಅಲೋಚನೆ ಮಾಡಬೇಕಾದಂತಹ ಪರಿಸ್ಥಿತಿ ನಮಗೆ ಅನಿವಾರ್ಯವಾಗಿದೆ. ಆದ್ದರಿಂದ ಮಾನ್ಯ ಸಭಾಧ್ಯಕ್ಷರೇ, ಸಭೆಯು ನಡೆಯಬೇಕು, ಕಲಾಪಗಳು ನಡೆಯುಬೇಕು ಮತ್ತು ಬೇರೆ ಬೇರೆ ಇಲಾಖೆಗಳಿಗೆ ಸಂಬಂಧಪಟ್ಟಂತೆ ಚರ್ಚೆ ಇದೆ, ಇಲಾಖೆಗಳ ಬಗ್ಗೆ ಚರ್ಚೆಯಾಗಬೇಕು. ಹಲವಾರು ಸಮಸ್ಯೆಗಳಿವೆ, ಆದ್ದರಿಂದ ಸದನವನ್ನು ನಡೆಸಬೇಕೆಂದು ಹೇಳಿ ನಾನು ತಮ್ಮಮೂಲಕ ಒತ್ತಾಯವನ್ನು ಮಾಡುತ್ತಿದ್ದೇನೆ.

ಶ್ರೀ ಬಿ. ಮುನಿಯಪ್ಪ : ಮಾನ್ಯ ಅಧ್ಯಕ್ಷರೇ, ಶುಕ್ರವಾರ ದಿವಸ ಸಂಜೆ, ಸಭೆ ಮುಕ್ತಾಯ ಹಂತದಲ್ಲಿ ನಮ್ಮ ಪ್ರೀತಿಯ ಸಹೋದರರಾದ ಶ್ರೀ ಶ್ರೀರಾಮರೆಡ್ಡಿಯವರು ಏನು ನಿಲುವಳಿ ಸೂಚನೆ ಇತ್ತು ಅದೆಲ್ಲ ಮುಗಿದು ಅವರ ವಿಷಯದ ಮೇಲೆ ಪ್ರಸ್ತಾಪ ಮಾಡಿ ಸಭೆ ಪ್ರಾರಂಭ ಮಾಡಿದರು ಮತ್ತೆ ಸೋಮವಾರ ಬೆಳಿಗ್ಗೆ ಸೇರುತ್ತದೆ ಎಂದು ತಾವು ಹೇಳಿದಿರಿ. ದಯವಿಟ್ಟು ಸಭೆಯ ಮುಂದೆ ಇರತಕ್ಕ ವಿಷಯಗಳನ್ನು ಚರ್ಚೆ ಮಾಡಿ ಸಭೆ ನಡೆಯುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು. ಅವರು ಏನು ಅವತ್ತು ಪ್ರಸ್ತಾಪ ಮಾಡಿದ್ದಾರೆ ಅದನ್ನು ಮುಂದುವರೆಸುವುದಕ್ಕೆ ಅವಕಾಶ ಕೊಡಬೇಕು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಸಭಾಧ್ಯಕ್ಷರೆ, ಕಳೆದ ಕೆಲವಾರು ದಿವಸಗಳಿಂದ ಅನೇಕ ವಿಚಾರಗಳನ್ನು ಇಲ್ಲಿ ಚರ್ಚೆ ಮಾಡುವುದಕ್ಕೆ ನಮಗೆ ಅವಕಾಶ ಸಿಕ್ಕಿತ್ತು. ಆದರೆ ದಿನೇದಿನೇ ಹೋದಹಾಗೆ ರಾಜ್ಯದ ಜನ ನಮ್ಮನ್ನು ನೋಡಿ ನಗಾಡುವಂಥ ಪರಿಸ್ಥಿತಿ ಬಂದಿದೆ. ಇವತ್ತು ಸಂಖ್ಯಾಬಲದಲ್ಲಿ ಕಾಂಗ್ರೆಸ್ ಮತ್ತು ಬಿ.ಜೆ.ಪಿ.ಯವರು ಹೆಚ್ಚಿಗೆ ಇದ್ದಿರಬಹುದು. ಆದರೆ ಸಂಖ್ಯಾಬಲ ಒಂದೇ ಉಂಟು ಎಂದು ಹೇಳಿ ನಿನ್ನೆ ಸದನದ ನಾಯಕರು ಈ ಸಭೆ ನಡೆಸುವ ಉದ್ದೇಶದಿಂದ ಅವರಿಗೆ ಒಂದು ಅವಕಾಶ ಕೊಡಬೇಕೆಂದು ತಮ್ಮಲ್ಲಿ ಕೇಳಿದರು. ನೀವು ಸಭೆಯನ್ನು ಅಡ್ಜರ್ನ್ ಮಾಡಿ ಅರ್ಧ ಗಂಟೆಯೊಳಗೆ ಪುನಃ ಕರೆಯುತ್ತೇನೆ ಎಂದು ಹೇಳಿದವರು ಸಾಯಂಕಾಲ 6 ಗಂಟೆಯತನಕ ಯಾವುದೇ ಉತ್ತರ ಇಲ್ಲದೇ ಇದ್ದುದರಿಂದ ನಾವು ಇಲ್ಲಿ ಕಾದು ಕುಳಿತುಕೊಂಡಿದ್ದೆವು. ಏನೂ ಸದನ ನಡೆಯಲಿಲ್ಲ. ಇವತ್ತೂ ಕೂಡ ಸದನವನ್ನು ನೀವು ಮುಂದೂಡದೆ ಸದನದ ಕಾರ್ಯಕಲಾಪವನ್ನು ನಡೆಸಲಿಕ್ಕೆ ಅವಕಾಶ ಮಾಡಿಕೊಡಬೇಕು. ಸಾಕಷ್ಟು ವಿಷಯಗಳು ಚರ್ಚೆ ಮಾಡಲಿಕ್ಕೆ ಇವೆ. ಕಳೆದ ಬಾರಿ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಹಾಗೆ ಅನೇಕ ವಿಚಾರಗಳನ್ನು ಚರ್ಚೆ ಮಾಡಲಿಕ್ಕೆ ಇವೆ. ಕಳೆದ ಬಾರಿ ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಹಾಗೆ ಅನೇಕ ವಿಚಾರಗಳನ್ನು ನಾವು ಮಂಡನೆ ಮಾಡಿದ್ದೇವೆ. ಅದಕ್ಕೆ ನಮಗೆ ಉತ್ತರವೇ ಸಿಗಲಿಲ್ಲ. ಸರ್ಕಾರದ ಕಡೆಯಿಂದ ಯಾವ ನೀತಿ ಎನ್ನುವುದನ್ನು ಕೂಡ ನಮಗೆ ಪಡೆದುಕೊಳ್ಳುವುದಕ್ಕೆ ಅವಕಾಶ ಸಿಗಲಿಲ್ಲ. ಇನ್ನು ಇರುವುದು ಮೂರು ದಿವಸ. ಈ ಮೂರು ದಿವಸಗಳಲ್ಲಿ ನಾವು ಸಾಕಷ್ಟು ಚರ್ಚೆ ಮಾಡಬೇಕೆಂದು ನಮ್ಮ ಪಕ್ಷದ ಪರವಾಗಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಭಾಧ್ಯಕ್ಷರೆ, ಈ ಬಾರಿ ವಿಧಾನಸಭೆ ಪ್ರವೇಶ ಮಾಡಿದ ಮೇಲೆ ಸುಮಾರು ಒಂದೂವರೆ ತಿಂಗಳಿಂದ ವಿಧಾನಸಭಾ ಅಧಿವೇಶನ

ನಡೆಯುತ್ತಾ ಇದೆ. ತಮಗೆ ಗೊತ್ತಿರುವಹಾಗೆ ನನ್ನದು 7 ದಿವಸ ಪ್ರಶ್ನೆಗಳು ಬಂದವು. ಆ ಪ್ರಶ್ನೆಗಳು ಬಂದ ದಿವಸವೆಲ್ಲಾ ಬರೀ ಇದೇ ಪ್ರಾರಂಭವಾಗಿ ಒಂದು ದಿವಸವೂ ಸಹ ಸದನ ನಡೆಯದೇ ಧರಣಿ ಸತ್ಯಾಗ್ರಹದಲ್ಲೇ ಕೊನೆಗೊಂಡು ನಮ್ಮ ಪ್ರಶ್ನೆಗಳೂ ಸಹ ಚರ್ಚೆಗೆ ಬರದೇ ಇರತಕ್ಕಂಥ ಪರಿಸ್ಥಿತಿ ಬಂದು ಆ ಅವಕಾಶದಿಂದ ವಂಚಿತರಾಗಿರತಕ್ಕಂಥವರು ನಾವೆಲ್ಲಾ ಆಗಿದ್ದೇವೆ. ಇದಲ್ಲದೆ ಇತ್ತೀಚಿನ ದಿನಗಳಲ್ಲಿ ಬಹಳ ಸತಸಂಪ್ರದಯ ಇರತಕ್ಕಂಥ ಸಭೆ ಇದು. ಯಾವುದಾದರೂ ವಿಧಾನಸಭೆಯಲ್ಲಿ ಒಂದು ಬಹಿಷ್ಕಾರ ನಡೆಯುತ್ತದೆ, ಬಾವಿಗೆ ಹೋಗುತ್ತಾರೆ, ಧರಣಿ ಮಾಡುತ್ತಾರೆ ಎಂಬುದು ಗೊತ್ತಿದ್ದರೆ ಬಹಳ ಅಪರೂಪಕ್ಕೆ ಮಾಡುತ್ತಿದ್ದರು. ಅದಕ್ಕೆ ಗಾಂಭೀರ್ಯ ಇರುತ್ತಿತ್ತು. ಇತ್ತೀಚಿನ ದಿನಗಳಲ್ಲಿ ಧರಣಿಗೂ ಗಾಂಭೀರ್ಯ ಇಲ್ಲ, ಭಾವಿಗೆ ಹೋಗುವುದಕ್ಕೂ ಗಾಂಭೀರ್ಯ ಇಲ್ಲ. ಮುಷ್ಕರ ಮಾಡುವುದಕ್ಕೂ ಗಾಂಭೀರ್ಯ ಇಲ್ಲ ಎನ್ನುವ ಮಟ್ಟಕ್ಕೆ ಜನ ಮಾತನಾಡುಕೊಳ್ಳುವ ಮಟ್ಟಕ್ಕೆ ಹೋಗಿದ್ದಾರೆ. ನಾವು ತಮ್ಮಲ್ಲಿ ವಿನಂತಿ ಮಾಡುವುದಿಷ್ಟೆ. ನಾವು ನಿನ್ನೆಯಿಂದ ಕಾದು, ಎಷ್ಟು ಹೊತ್ತಿಗೆ ಸದನ ಪ್ರಾರಂಭವಾಗುತ್ತದೋ, ನಾವು ಚರ್ಚೆಯಲ್ಲಿ ಭಾಗವಹಿಸಬೇಕು, ಬಹಳಷ್ಟು ಇಲಾಖೆಗಳ ಬಗ್ಗೆ ಬಹಳಷ್ಟು ಚರ್ಚೆಗಳಾಗಿ ಅದರ ಬಗ್ಗೆ ತೀರ್ಮಾನ ಆಗಬೇಕು. ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿಗಳು ಅಸ್ತಿತ್ವಕ್ಕೆ ಬಂದು ಇವತ್ತು ಎಷ್ಟೋ ತೀರ್ಮಾನ ಆಗಿದೆ, ಸದನದಲ್ಲಿ ಚರ್ಚೆಯಾಗಿ ಅಂತಿಮವಾಗಿ ಆಗದೇ ಕೆಲಸಗಳೆಲ್ಲಾ ಸ್ಥಗಿತವಾಗಿರುವುದನ್ನು ನಾವು ನೋಡುತ್ತಾ ಇದ್ದೇವೆ. ಆದ್ದರಿಂದ ದಯಮಾಡಿ ತಾವು ಸದನ ಮುಂದೆ ಹಾಕುವುದಕ್ಕಿಂತ ಮುಂಚೆ ತಾವು ಯೋಚನೆ ಮಾಡಿ ಈ ಸದನದಲ್ಲಿ ನಮಗೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಬೇಕು. ವಿರೋಧಪಕ್ಷ ಅಂದರೆ ಅವರೇ ಅಲ್ಲ. ಈಗ ಇಲ್ಲಿ ಸಿ.ಪಿ.ಎಂ.ನವರಿದ್ದಾರೆ, ಅಣ್ಣಾ ಡಿ.ಎಂ.ಕೆ.ಯವರಿದ್ದಾರೆ, ಸಿ.ಪಿ.ಐ.ನವರಿದ್ದಾರೆ, ಪಕ್ಷೇತರರಿದ್ದಾರೆ, ಕೆ.ಸಿ.ಪಿ.ನವರಿದ್ದಾರೆ. ಇದೇ ರೀತಿ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಾಗ ಸನ್ಮಾನ್ಯ ಸಭಾಧ್ಯಕ್ಷರೆ, ಅವರು ಇಲ್ಲಿ ಕುಳಿತಿದ್ದರಲ್ಲ, ಅವರು ಅಧಿಕಾರ ನಡೆಸಿದಂಥ ಸಂದರ್ಭದಲ್ಲಿ ಇದೇ ವಿರೋಧಪಕ್ಷದವರು ಹೊರಕ್ಕೆ ಹೋದಾಗ 15 ದಿವಸಗಳ ಕಾಲ ಇಷ್ಟೇ ಜನ ವಿರೋಧಪಕ್ಷದವರನ್ನು ಇಟ್ಟುಕೊಂಡು ಒಂದು ವಾರದ ಕಾಲ ಸದನವನ್ನು ನಡೆಸಿರತಕ್ಕಂಥ ನಿದರ್ಶನಗಳಿವೆ. ಸಂಸದೀಯ ಚಟುವಟಿಕೆಯಲ್ಲಿ ತಪ್ಪಾದಾಗ ಕ್ಷಮೆ ಕೇಳತಕ್ಕಂಥದ್ದು, ತಪ್ಪಾಗಿದೆ ಎಂದು ಹೇಳತಕ್ಕಂಥದ್ದು ಬಹುಶಃ ದೊಡ್ಡದಾಗಿ ನಡೆದಿದೆ. ಸನ್ಮಾನ್ಯ ಸಭಾನಾಯಕರು ಎಲ್ಲರ ಪರವಾಗಿ ನಾನು ರಿಗ್ರೆಟ್ ಮಾಡುತ್ತೇನೆ ಎನ್ನತಕ್ಕಂಥ ದೊಡ್ಡ ಮಾತನ್ನು ಈ ಸದನದಲ್ಲಿ ಹೇಳಿದ್ದಾರೆ. ಇಷ್ಟಾದರೂ ಸಹಿತ ಇವರು ಮಕ್ಕಳು ಹಠ ಹಿಡಿದಹಾಗೆ ಯಾವುದೋ ಒಂದು ಸಣ್ಣ ವಿಚಾರಕ್ಕೆ ಹಠ ಹಿಡಿದುಕೊಂಡು ಆಚೆಗೆ ಹೋಗಿರುವಂಥದ್ದು ಸಾಧುವಲ್ಲ. ಈಗಲೂ ಕೂಡ ನಾನು ಈ ಸದನದ ಮೂಲಕ ತಮ್ಮಲ್ಲಿ ವಿನಂತಿ ಮಾಡುತ್ತೇನೆ, ಈಗ ಅವರನ್ನು ಕರೆಯುವುದಕ್ಕೆ ಕೇಳುವುದಕ್ಕೆ ನಮ್ಮದು ಯಾರದೂ ಅಡ್ಡಿ ಇಲ್ಲ. ಅವರ ಬಗ್ಗೆ ನಮಗೆ ಬಹಳ ಗೌರವ ಇದೆ. ಆದರೆ ಇಷ್ಟೊಂದು ಬೇಜವಾಬ್ದಾರಿಯುತವಾಗಿ ವಿರೋಧಪಕ್ಷಗಳು ನಡೆಯುತ್ತಾ ಇರತಕ್ಕಂಥ ರೀತಿ ನೋಡಿದರೆ ಯಾರಿಗೂ ಮರ್ಯಾದೆ ಬರತಕ್ಕಂಥದಲ್ಲ. ದಯವಿಟ್ಟು ಇದಕ್ಕೆ ಮಂಗಳ ಹಾಡಿ ಸದನ ನಡೆಯುವುದಕ್ಕೆ ದಯಮಾಡಿ ಅವಕಾಶ ಮಾಡಿಕೊಡಬೇಕೆಂದು ತಮ್ಮಲ್ಲಿ ನಾನು ವಿನಯಪೂರ್ವಕವಾಗಿ ವಿನಂತಿ ಮಾಡುತ್ತೇನೆ ಸ್ವಾಮಿ.

ಶ್ರೀ ಸಯ್ಯದ್ ಜುಲ್ಫಿಕರ್ ಹಷ್ಮಿ (ಬೀದರ್) : ಸನ್ಮಾನ್ಯ ಸಭಾಧ್ಯಕ್ಷರೆ, ನಾನು ಹೊಸದಾಗಿ ಈ ಸದನಕ್ಕೆ ಬಂದಿದ್ದೇನೆ. ನಾನು ಬಹುಜನ ಸಮಾಜವಾದಿ ಪಕ್ಷದಿಂದ ಇಲ್ಲಿಗೆ ಆರಿಸಿ ಬಂದಿದ್ದೇನೆ. ನಮಗೆ ಡಿಮ್ಯಾಂಡ್ಸ ಮೇಲೆ ಮಾತನಾಡುವುದಕ್ಕೆ ಅವಕಾಶ ಸಿಕ್ಕಿಲ್ಲ. ನಮ್ಮ ಜನ ನಮ್ಮನ್ನು ಕೇಳುತ್ತಾರೆ. ನಮ್ಮದು ಬಹುಜನ ಸಮಾಜ ಇದೆ. ಎಂ.ಎಲ್.ಎ. ನಮ್ಮ ಪಕ್ಷದಲ್ಲಿ ನಾನು ಒಬ್ಬ ಇದ್ದರೂ ಸಮಾಜ ನಮ್ಮದು ಬಹಳ ದೊಡ್ಡದಿದೆ. ಎಲ್ಲದಕ್ಕಿಂತ ಶುಭ್ರ ಸಮಾಜ ಮಜ್ದೂರ್ ಸಮಾಜ ನಮ್ಮ ಜೊತೆ ಇದೆ. ಅವರದು ಸಮಸ್ಯೆ ನಮ್ಮ ಮುಂದೆ ಇದೆ. ಅವರ ಪರವಾಗಿ ನಾನು ಮಾತನಾಡುವುದಕ್ಕೆ ನನಗೆ ಅವಕಾಶ ಸಿಕ್ಕಿಲ್ಲ. ಬಿ.ಜೆ.ಪಿ. ಆಗಲೀ, ಕಾಂಗ್ರೆಸ್ ಆಗಲೀ ಏನು ಧರಣಿ ಕುಳಿತಿದ್ದಾರೆ, ಬಾಯಕಾಟ್ ಮಾಡುತ್ತಿದ್ದಾರೆ, ಇದು ಜನರ ಪರವಾಗಿ ಸಮಾಜದ ಪರವಾಗಿ ಇಲ್ಲ. ಇದು ಪೊಲಿಟಿಕ್ಸ ಇದೆ. ಇವರ ಪೊಲಿಟಿಕ್ಸನಲ್ಲಿ ನಮ್ಮನ್ನು ತುಳಿಯಬೇಡಿ. ನಮಗೆ ಮಾತನಾಡಲಿಕ್ಕೆ ಅವಕಾಶ ಕೊಡಬೇಕು ಎನ್ನುವುದು ನಮ್ಮ ವಿನಂತಿ ಇದೆ.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಸಭಾನಾಯಕರು ಆವತ್ತು ಸದನ ಮುಂದೂಡುವುದಕ್ಕಿಂತ ಮುಂಚೆ ಸದನದಲ್ಲಿ ನಡೆದಂಥ ಘಟನೆಗಳ ಬಗ್ಗೆ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ನಂತರ ನಿನ್ನೆ ಬೆಳಿಗ್ಗೆ ಬಂದು ತಮ್ಮ ಸಮ್ಮುಖದಲ್ಲೇ ಆ ಘಟನೆಗಳನ್ನು ಮರೆತು ವಿರೋಧಪಕ್ಷದವರು ಸಹಕರಿಸಬೇಕು, ಅವರನ್ನು ತಾವು ಕರೆಸಿ ಮಾತನಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಕೂಡ ಸಲಹೆ ಮಾಡಿದ್ದರು. ನಾವು ಎಲ್ಲಾ ಉತ್ತರಗಳನ್ನು ಕೊಡುವುದಕ್ಕೆ ಎಲ್ಲ ರೀತಿಯಿಂದ ಸರ್ಕಾರದ ಕಡೆಯಿಂದ ಸಿದ್ಧತೆಗಳನ್ನು ಮಾಡಿಕೊಂಡು ಬಂದರೂ, ವಿರೋಧಪಕ್ಷದವರು ಇದ್ದರೆಷ್ಟು ಬಿಟ್ಟರೆಷ್ಟು ಎಂದು ನಡೆಸಿಕೊಂಡು ಹೋಗುವ ಶಕ್ತಿ ಇದ್ದರೂ ಇದು ಒಳ್ಳೆಯ ಸಂಪ್ರಾದಾಯವಲ್ಲವೆಂದು ತಿಳಿದು, ಪ್ರಜಾತಂತ್ರೀಯ ಅದರಲ್ಲೂ ವೈಧಾನಿಕ ಸಂಪ್ರದಾಯದಲ್ಲಿರತಕ್ಕ ನಾವು ಅವರನ್ನು ಉಪೇಕ್ಷೆ ಮಾಡಿದರು ಎಂದು ಆಗಬಾರದು ಎಂದು ಮನಸ್ಸಿಗೆ ಎಷ್ಟೇ ನೋವಾದರೂ ವಿರೋಧಪಕ್ಷದವರನ್ನು ಹೊರಗೆ ಹಾಕಿ ಇಲ್ಲಿ ಕಾನೂನು ಮಾಡಿಕೊಂಡರು ಎಂದು ಕೆಟ್ಟ ಹೆಸರು ಬರಬಾರದು ಎಂದು ನಾವು ಎಷ್ಟೋ ಸಹಿಸಿದ್ದೇವೆ. ಮಾನ್ಯ ಸದಸ್ಯರುಗಳು ಹೇಳಿರುವ ಪ್ರತಿಯೊಂದು ಮಾತು ಸತ್ಯ. ವಿನಾಕಾರಣ ಇವತ್ತು ಸದನದ ವೇಳೆ ಹಾಳಾಗಿದೆ. ನಾವು ತಯಾರಿದ್ದೇವೆ. ಎಲ್ಲ ಬೇಡಿಕೆಗಳಿಗೆ ಉತ್ತರ ಕೊಡುವುದಕ್ಕೆ ತಯಾರಿದ್ದೇವೆ. ಕಾನೂನಿಗೆ ಉತ್ತರ ಕೊಡುವುದಕ್ಕೆ ತಯಾರಿದ್ದೇವೆ. ಆದ್ದರಿಂದ ಅಂತಿಮವಾಗಿ ನಾವು ಸರ್ಕಾರ ನಿಮ್ಮ ಆಜ್ಞೆಗೆ ತಲೆಬಾಗುತ್ತೇವೆ. ಇವತ್ತು ತಾವೇನಾದರೂ ತಮ್ಮ ಮನಸ್ಸಿನಲ್ಲಿ ಮತ್ತೆ ಅವರನ್ನು ಕರೆಸಿ ಮಾತನಾಡಬೇಕು ಎಂದು ಇದ್ದರೆ, ಅವರಿಲ್ಲದೆ ಸದನ ನಡೆಸಿಕೊಂಡು ಹೋಗಿ ಎಂದರೆ ನಾನು ಬೇಕಾದರೆ ಉತ್ತರ ತಂದಿದ್ದೇನೆ. ಈಗಲೇ ಕ್ವೆಶ್ಚನ್ ಹವರ್ ಶುರು ಮಾಡಿ ಎಂದು ಹೇಳುತ್ತೇನೆ. ಆದರೆ ತಮ್ಮ ಅಭಿಪ್ರಾಯದಲ್ಲಿ ಮತ್ತು ನಾನೂ ಸ್ವತಃ ಅವರಿಲ್ಲದೆ ಸದನವನ್ನು ನಡೆಸುವುದು ಅಷ್ಟು ಶೋಭಾಯಮಾನ ಅಲ್ಲ. ಆದರೂ ಕೊನೇ ಪ್ರಯತ್ನ ತಾವು ಮಾಡಬಹುದು. ತಾವು ಎಷ್ಟು ಸಮಯಕ್ಕೆ ಕರೆಯುತ್ತೀರೋ ಅಷ್ಟು ಸಮಯಕ್ಕೆ ನಾವು ಬರುತ್ತೇವೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ನಿನ್ನೆ ಮಾನ್ಯ ಸಭಾನಾಯಕರು ಸಭೆ ಪ್ರಾರಂಭವಾದಾಗ ಸ್ವತಃ ಅವರೇ ಹೇಳಿದ್ದಾರೆ, ಮೊನ್ನೆ ನಡೆದಿರತಕ್ಕ ಘಟನೆಗೆ ನಾನು ಕ್ಷಮೆ ಕೇಳುತ್ತಿದ್ದೇನೆ, ಅವರಲ್ಲಿ ತಮ್ಮ ಮುಖಾಂತರ ಮನವಿ ಮಾಡುತ್ತಿದ್ದೇನೆ, ದಯವಿಟ್ಟು ಅವರು ಬಂದು ಸಭೆಯಲ್ಲಿ ಕುಳಿತು ಸಹಕರಿಸಬೇಕು, ಸಭೆ ನಡೆಯಲಿ ಎಂದು. ಇದಾದಮೇಲೆ ತಾವು ಕೂಡ ಪ್ರಯತ್ನ ಮಾಡಿದ್ದೀರಿ ಎಂದು ನಮ್ಮ ಗಮನಕ್ಕೆ ಬಂದಿದೆ. ನೀವು ಅವರನ್ನು ಕರೆಯಿಸಿ ಮಾತನಾಡಿದ್ದೀರಿ. ಇದೆಲ್ಲವೂ ಕೂಡ ಪ್ರಜಾಪ್ರಭುತ್ವದಲ್ಲಿ ಸಂಪ್ರದಾಯಗಳು. ವಿರೋಧಪಕ್ಷಗಳನ್ನು ಬಿಟ್ಟು ಇಲ್ಲಿ ಸರ್ಕಾರ ನಡೆಸುವುದು ಅಥವಾ ಸಭೆ ನಡೆಸುವುದು ಸರಿಯಲ್ಲ. ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷಗಳು ಮತ್ತು ಆಡಳಿತ ಪಕ್ಷ ಎಲ್ಲರೂ ಒಟ್ಟಾಗಿ ಹೋಗಬೇಕು ಎಂಬುದರಲ್ಲಿ ನಮ್ಮ ಭಿನ್ನಾಭಿಪ್ರಾಯ ಇಲ್ಲ. ನಾನೂ ಕೂಡ ಅವರಿಗೆ ಮನವಿ ಮಾಡುತ್ತಿದ್ದೇನೆ, ಅವರು ರಾಷ್ಟ್ರೀಯ ಪಕ್ಷಗಳವರು. ಆ ಎರಡು ಪಕ್ಷಗಳು ಕೂಡ ಜವಾಬ್ದಾರಿ ಸ್ಥಾನದಲ್ಲಿರುವ ಪಕ್ಷಗಳು. ಈಗಲೂ ಕೂಡ ಅವರು ಸದನಕ್ಕೆ ಬಂದು ಸದನವನ್ನು ನಡೆಸಿಕೊಂಡು ಹೋಗುವುದಕ್ಕೆ ಸಹಕಾರ ಕೊಡಬೇಕು. ಆಗಿರತಕ್ಕ ಘಟನೆಗಳಿಗೆ ಸಭಾನಾಯಕರು ಎಲ್ಲರ ಪರವಾಗಿ ಕೂಡ ಕ್ಷಮೆ ಕೇಳಿದ್ದಾರೆ. ಅದಕ್ಕೆ ಮನ್ನಣೆ ಕೊಡಬೇಕಾಗುತ್ತದೆ. ಏಕೆಂದರೆ ಪ್ರಜಾಪ್ರಭುತ್ವದಲ್ಲಿ ಘಟನೆಗಳು ನಡೆಯುವುದು ಬಹಳ ಸಹಜ. ಆ ಘಟನೆಗಳು ನಡೆದಿದ್ದಕ್ಕೆ ಅವರು ತಮ್ಮ ವಿಷಾದವ್ನು ವ್ಯಕ್ತಪಡಿಸಿದ್ದಾರೆ. ಅಷ್ಟು ಮನವಿ ಮಾಡಿದ್ದಾರೆ. ತಮ್ಮ ಮುಖಾಂತರ ಸಮಸ್ಯೆ ಪರಿಹಾರ ಮಾಡಿ ಎಂದು ನಿನ್ನೆ ಕೇಳಿದರು. ತಾವೂ ಸಾಕಷ್ಟು ಪ್ರಯತ್ನ ಮಾಡಿದಿರಿ. ಆದರೆ ಈ ಪ್ರಯತ್ನಕ್ಕೂ ಮತ್ತು ತಾಳ್ಮೆಗೂ ಒಂದು ಮಿತಿ ಇರಬೇಕು. ಮಿತಿಮೀರಿ ನಡೆಯುವುದು ಸರಿಯಲ್ಲ. ಹಠಮಾರಿ ಧೋರಣೆ ಪ್ರಜಾಪ್ರಭುತ್ವದಲ್ಲಿ ಸರಿಯಲ್ಲ. ತಪ್ಪು ಮಾಡಿದಾಕ್ಷಣ ಯಾರಿಗೂ ಕೂಡ ಕತ್ತು ತೆಗೆಯುವುದಕ್ಕಾಗುವುದಿಲ್ಲ. ಆದ್ದರಿಂದ ನಮ್ಮ ಪ್ರಶ್ನೆ ಇಷ್ಟೆ. ನಾವು ರಾಜಕೀಯ ಪಕ್ಷವಾಗಿ ಇಲ್ಲಿ ಬಂದು ಕುಳಿತಿದ್ದೇವೆ. ನಾವೂ ಜನರನ್ನು ಪ್ರತಿನಿಧಿಸುತ್ತಿದ್ದೇವೆ. ನಮ್ಮ ಶಕ್ತಿಯಾನುಸಾರವಾಗಿ ನಾವು ಜನರನ್ನು ಪ್ರತಿನಿಧಿಸುತ್ತಿದ್ದೇವೆ. ನಮ್ಮ ಸಹೋದ್ಯೋಗಿ ಮಿತ್ರರುಗಳೂ ಎಲ್ಲಾ ಕುಳಿತಿದ್ದಾರೆ. ನಾವು ನಮ್ಮ ಜನರನ್ನು ಪ್ರತಿನಿಧಿಸುತ್ತಿದ್ದೇವೆ. ಅವರೂ ಪ್ರತಿನಿಧಿಸುತ್ತಿದ್ದಾರೆ. ಆದರೆ ಸಂಖ್ಯೆಯಲ್ಲಿ ವ್ಯತ್ಯಾಸ ಇರಬಹುದು. ಸಂಖ್ಯೆಯಲ್ಲಿ ಹೆಚ್ಚು ಕಡಿಮೆ ಇದೆ ಎಂದಾಕ್ಷಣ ತಮ್ಮ ಅಧಿಕಾರವನ್ನು ಚಲಾಯಿಸಬಹುದು ಎನ್ನುವ ರೀತಿಯಲ್ಲಿ ಇಡೀ ಸದನವನ್ನು ಹೈಜಾಕ್ ಮಾಡಿಬಿಟ್ಟು ಇಲ್ಲಿ ಸದನರೇ ನಡೆಯದಹಾಗೆ ಮಾಡತಕ್ಕದ್ದು....

ಅಧ್ಯಕ್ಷರು : ಬೇಡ. ಅವರಿಲ್ಲ ಇಲ್ಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ತಮಗೆ ಹೇಳುತ್ತೇನೆ. ನಾನು ಹೇಳುವುದಿಷ್ಟೆ. ನಮಗೆ ಸದನ ನಡೆಯಬೇಕು. ಕಾಲಾವಕಾಶ ಕೊಟ್ಟಾಗಿದೆ. ಇದನ್ನು ಮತ್ತೆ ಮುಂದುವರಿಸಿಕೊಂಡು ಹೋಗುವುದರಲ್ಲಿ ಯಾವುದೇ ಅರ್ಥ ಉಳಿಯುವುದಿಲ್ಲ. ನಮ್ಮನ್ನು ಜನ ಪ್ರಶ್ನೆ ಕೇಳುತ್ತಾರೆ.

ಅಧ್ಯಕ್ಷರು : ರಿಪಿಟಿಷನ್ ಬೇಡ, ಹೇಳಿದ್ದೀರಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸದನ ನಡೆಯಬೇಕು ಎಂದು ಮತ್ತೆ ಒತ್ತಾಯ ಮಾಡುತ್ತೇನೆ.

ಶ್ರೀ ಯು.ಆರ್. ಸಭಾಪತಿ : ಸಭಾಧ್ಯಕ್ಷರೆ, ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ ಒಂದು ವಿಚಾರದಲ್ಲಿ ನನಗೆ ಸಹಮತ ಇಲ್ಲ. ಏಕೆಂದರೆ ಅವರು ವಿರೋಧ ಪಕ್ಷಗಳನ್ನು ಹೊರಗಿಟ್ಟುಕೊಂಡು ನಾವು ಮಾಡಿದ್ದೇವೆ ಎಂಬ ಮಾತು ಹೇಳಿದರು. ಇಲ್ಲಿ ಒಟ್ಟು 7 ವಿರೋಧಪಕ್ಷಗಳಿವೆ. ಎರಡು ವಿರೋಧಪಕ್ಷಗಳು ಮಾತ್ರ ಹೊರಗೆ ಹೋಗಿವೆ. ಇನ್ನು 5 ವಿರೋಧಪಕ್ಷಗಳು ನಾವು ಇದ್ದೇವೆ. ಸಿ.ಪಿ.ಐ., ಬಿ.ಎಸ್.ಪಿ., ಎ.ಐ.ಎ.ಡಿ.ಎಂ.ಕೆ., ಕೆ.ಸಿ.ಪಿ. ಮತ್ತು ಎಂ.ಇ.ಎಸ್. ಸಂಖ್ಯಾಬಲದಲ್ಲಿ ನಾವು ಕಡಿಮೆ ಇದ್ದರೂ ಪಕ್ಷದ ರೀತಿಯಲ್ಲಿ ಐದು ವಿರೋಧಪಕ್ಷಗಳು ನಾವಿದ್ದೇವೆ.

ಶ್ರೀ ಜೆ.ಎಚ್. ಪಟೇಲ್ : ಎಲ್ಲರೂ ಎಂದು ಹೇಳಲಿಲ್ಲ.

+ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಅಧ್ಯಕ್ಷರೆ, ನಮ್ಮ ಉಪನಾಯಕರು ಏನು ಹೇಳಿದ್ದಾರೆ ಅದು ಸಮರ್ಥವಾಗಿದೆ. ಆದರೆ ಒಂದು ಮಾತನ್ನು ಹೇಳದೆ ಹೋದರೆ ತಪ್ಪು ಆದೀತೆಂದು ನನ್ನ ಅನಿಸಿಕೆ. This House represent the people of Karnataka, that means you represent the people of Karnataka. ಆ ಕಂಟೆಸ್ಟನಲ್ಲಿ ತಮ್ಮ ಅಭಿರಕ್ಷೆಯಲ್ಲಿ ಸದನದಲ್ಲಿ ಏನು ನಡೆಯುತ್ತಿದೆ, ಹೊರಗೆ ಜನ ಏನು ಹೇಳುತ್ತಿದ್ದಾರೆ ಎಂಬುದನ್ನು ನೀವು ಸಮೀಕ್ಷೆ ನಡೆಸಿಸಬೇಕು. You are the custodian of the House. You are above the ruling party and the opposition party. ಇಲ್ಲಿ ಆಡಳಿತ ಪಕ್ಷ ಯಾರ ರೀತಿ ನಡೆದುಕೊಳ್ಳುತ್ತಿದೆ, ವಿರೋಧ ಪಕ್ಷಗಳು ಯಾವ ರೀತಿ ನಡೆದುಕೊಳ್ಳುತ್ತಿವೆ ಎನ್ನುವುದರ ಬಗ್ಗೆ, ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಉತ್ತಮ ಪರಂಪರೆ ಇರತಕ್ಕಂಥ ಈ ಸದನದ ಬಗ್ಗೆ, ಈ ಸದನದ ಕಾರ್ಯಕ್ರಮಗಳ ಬಗ್ಗೆ, ದಿನೇದಿನೇ ಸಾರ್ವಜನಿಕರು ಏನು ಹೇಳುತ್ತಿದ್ದಾರೆ, ಯಾರನ್ನು ಯಾವ ರೀತಿ ಮಾತನಾಡುತ್ತಿದ್ದಾರೆ, ಆಡಳಿತ ಪಕ್ಷದವರ ಮೇಲೆ ಮಾತನಾಡುತ್ತಿದ್ದಾರೋ ವಿರೋಧ ಪಕ್ಷಗಳ ಮೇಲೆ ಮಾತನಾಡುತ್ತಿದ್ದಾರೋ ಅಥವಾ ವಿರೋಧಪಕ್ಷದ ನಾಯಕರ ಬಗ್ಗೆ ಮಾತನಾಡುತ್ತಿದ್ದಾರೋ ಅಥವಾ ಮುಖ್ಯಮಂತ್ರಿಗಳ ಬಗ್ಗೆ ಮಾತನಾಡುತ್ತಿದ್ದಾರೋ ಅಥವಾ ಆಯ್ಕೆಯಾಗಿ ಬಂದಿರತಕ್ಕಂತ ಸದಸ್ಯರ ಮೇಲೆ ಮಾತನಾಡುತ್ತಿದ್ದಾರೋ ಎನ್ನುವ ಬಗ್ಗೆ ತಾವು ಸಭಾಧ್ಯಕ್ಷರಾಗಿ ದಯವಿಟ್ಟು ಸಮೀಕ್ಷೆ ನಡೆಸಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಕರ್ನಾಟಕದ ಜನರು ಏನು ಅಧಿಕಾರವನ್ನು ಕೊಟ್ಟು ಕಳುಹಿಸಿದ್ದಾರೆ ಅವರ ಹಣದಲ್ಲಿ ಈ ಸದನದ ಸಭೆಯನ್ನು ನಡೆಸುತ್ತಾ ಇದ್ದೇವೆ. ಎಷ್ಟು ಸಮರ್ಪಕವಾಗಿ ನಾವು ಸದನದಲ್ಲಿ ನಡೆದುಕೊಳ್ಳುತ್ತಿದ್ದೇವೆ ಎನ್ನುವುದರ ಬಗ್ಗೆ ತಾವು ಒಂದು ಸಮೀಕ್ಷೆ ಮಾಡಬೇಕೆಂದು ಹೇಳಿ ನಾನು ಮನವಿ ಮಾಡುತ್ತೇನೆ. ಆ ಸಮೀಕ್ಷೆಯಲ್ಲಿ ಏನು ಜನ ಮಾತನಾಡುತ್ತಿದ್ದಾರೆ ಬೀದಿಯಲ್ಲಿ ಜನ ಏನು ಮಾತನಾಡುತ್ತಾರೆ, ಕಾರ್ಮಿಕರು ಏನು ಮಾತನಾಡುತ್ತಾರೆ, ಕರ್ನಾಟಕ ರಾಜ್ಯದ ಜನ ಯಾರ ಮೇಲೆ ಏನು ಮಾತನಾಡುತ್ತಾರೆ ಎನ್ನುವುದರ ಬಗ್ಗೆ ಸಮೀಕ್ಷೆ ಮಾಡಬೇಕು. ನಾವು ಕೂಡ ಬಹಳಷ್ಟು ವರ್ಷಗಳ ಕಾಲ ವಿರೋಧ ಪಕ್ಷದಲ್ಲಿ ಕುಳಿತು ಕೆಲಸ ಮಾಡಿದ್ದೇವೆ. ನಾವು ಒಂದು ಮಾತು ನೆನಪಿಗೆ ಬರುತ್ತದೆ. The opposition parties will have their own say and the ruling party will have its own way.

ವಿರೋಧ ಪಕ್ಷದವರು ನಮಗೆ ರಾಜೀನಾಮೆ ಕೊಡಿ, ಕೊಡಿ ಎಂದು ಕೇಳಿದರೆ ಹೇಗೆ. ಮಾನ್ಯ ಮುಖ್ಯಮಂತ್ರಿಯವರು ವಿಧಾನಪರಿಷತ್ತಿನಲ್ಲಿ ಉತ್ತರ ಕೊಡುತ್ತಾ 280 ಜನರ ಮೇಲೆ ಕಂಟೆಂಪ್ಟ ಇದೆ ಎಂದು ಅವರು ಅಲ್ಲಿ ಹೇಳಿದ್ದು ನನಗೆ ತಿಳಿದುಬಂತು. ಹಾಗಾದರೆ ಮಾನ್ಯ ಮುಖ್ಯಮಂತ್ರಿಗಳು 780 ಸಾರಿ ರಾಜಿನಾಮೆಯನ್ನನು ಕೊಡಬೇಕೇ? ವಿರೋಧ ಪಕ್ಷದವರು ಆಡಳಿತ ಪಕ್ಷವನ್ನು ರಾಜಿನಾಮೇ ಕೇಳುತ್ತಾರೆ, ಧರಣಿ ಕುಳಿತುಕೊಳ್ಳುತ್ತಾರೆ ಅಥವಾ ಸಭಾತ್ಯಾಗ ಮಾಡುತ್ತಾರೆ ಎಂದು ಹೇಳಿದರೆ ಸರ್ಕಾರ ನಡುಗಬೇಕು. ಆದರೆ ಆ ವರ್ತನೆ ಈಗ ಇಲ್ಲ. ಅದರ ಬಗ್ಗೆ ತಾವು ಸಮೀಕ್ಷೆ ಮಾಡಬೇಕು. ಈಗ ನಮಗೆ ಜನ ಅಧಿಕಾರ ಕೊಟ್ಟಿದ್ದಾರೆ. ತಾವು ತಾಳ್ಮೆಯಿಂದ ಇದ್ದೀರಿ. ಏಕೆಂದರೆ ನಮಗೆ ಆಡಳಿತ ಮಾಡುವುದಕ್ಕೆ ಅಧಿಕಾರ ಕೊಟ್ಟಿದ್ದಾರೆ. ಆ ತಾಳ್ಮೆ ನಮಗೆ ಇರಬೇಕು. ಅದನ್ನು ನಾನು ಒಪ್ಪುತ್ತೇನೆ. ವಿರೋಧ ಪಕ್ಷದವರನ್ನು ಬಿಟ್ಟು ನಾವು ಸದನ ನಡೆಸಬಾರದು. ಆದರೆ ವಿರೋಧ ಪಕ್ಷದ ನಾಯಕರಾಗಲಿ, ಅವರ ಮಿತ್ರಪಕ್ಷದ ಮಿತ್ರರುಗಳಾಗಲಿ ನಡೆದುಕೊಳ್ಳುತ್ತಾ ಇರತಕ್ಕಂಥ ರೀತಿ ಈ ಕರ್ನಾಟಕ ರಾಜ್ಯದ ಸಂಸದೀಯ ವ್ಯವಹಾರದಲ್ಲಿ ಇಷ್ಟೊಂದು ಪರಂಪರೆ ಇರತಕ್ಕಂಥ ವಿಧಾನಸಭೆಗೆ ಗೌರವ ತರುತ್ತಾ ಇದೆಯೇ ಎಂದು ಹೇಳಿ ನೀವು ಸಮೀಕ್ಷೆ ಮಾಡಿಸಬೇಕು. ಸಮೀಕ್ಷೆ ನಡೆಸಿ ಅದನ್ನು ತಾವು ಈಗ ಹೇಳದಿದ್ದರೂ ಪರವಾಗಿಲ್ಲ. ಯಾವುದಾದರೂ ಒಂದು ಸಂದರ್ಭದಲ್ಲಿ ನಾವು ಯಾವ ರೀತಿ ನಡೆದುಕೊಳ್ಳಬೇಕು ಎಂದು ಹೇಳಿ ತಮ್ಮ ಪೀಠದಿಂದ ಬುದ್ಧಿವಂತಿಕೆ ಮತ್ತು ತಿಳುವಳಿಕೆ ಹೇಗೆ ಇರಬೇಕು ಎಂದು ಆಡಳಿತ ಪಕ್ಷಕ್ಕೂ ಹೇಳಬೇಕು, ವಿರೋಧಪಕ್ಷಗಳಿಗೂ ಕೂಡ ಬರಬೇಕು, ಆ ನಿರ್ದೇಶನವನ್ನು ತಮ್ಮ ಪೀಠದಿಂದ ಸಮೀಕ್ಷೆ ಮಾಡಿ ಕೊಟ್ಟರೆ ನಮಗೆ ಜವಾಬ್ದಾರಿ ಬರುತ್ತದೆ. ಇಲ್ಲದಿದ್ದರೆ ಇನ್ನೊಂದು ತಾವು ಮಾಡಬೇಕು. ಈ ಸದನದಲ್ಲಿ ಏನೇನು ನಡೆಯುತ್ತದೆ ಎನ್ನುವ ವಿಚಾರ ಕರ್ನಾಟಕದ ಜನತೆಗೆ ಗೊತ್ತಾಗಲು ದೂರದರ್ಶನಕ್ಕೆ ತಾವು ಅವಕಾಶ ಮಾಡಿಸಿಕೊಡಬೇಕು. ಪಾರ್ಲಿಮೆಂಟನಲ್ಲಿ ನಡೆಯುವ ಕಾರ್ಯಕ್ರಮಗಳು ದೂರದರ್ಶದಲ್ಲಿ ಪ್ರಸಾರ ಆಗುತ್ತಿದೆ. ಅದೇ ರೀತಿ ಈ ಸದನದಲ್ಲಿ ಯಾರ್ಯಾರು ಯಾವ ರೀತಿ ನಡೆದುಕೊಳ್ಳುತ್ತಾರೆ ಎನ್ನುವಂಥದನ್ನು ಜನ ನೋಡಲಿಕ್ಕೆ ಪ್ರತಿಯೊಂದು ಸಹ ದೂರದರ್ಶನದಲ್ಲಿ ಪ್ರಸಾರವಾಗಬೇಕು ಪ್ರತಿ ದಿನ ಕೋಟ್ಯಾಂತರ ರೂಪಾಯಿ ಖರ್ಚಾಗುತ್ತಿದೆ. ಒಂದು ವಿಷಯದ ಮೇಲೆ, ಒಂದು ಬೇಡಿಕೆ ಮೇಲೆ ಇಲ್ಲಿ ಕುಳಿತುಕೊಂಡು ಮಾತನಾಡಲಿಕ್ಕೆ ಆಗಲಿಲ್ಲವಲ್ಲ ಎಂದು ದುಃಖವಾಗುತ್ತಿದೆ. ಸರ್ಕಾರ ಉತ್ತರ ಕೊಡುವುದಕ್ಕೆ ತಯಾರಾಗಿದೆ. ಈ ಸದನವನ್ನು ಸಮರ್ಥರಾಗಿ ನಡೆಸಿಕೊಂಡು ಹೋಗಲು ನಮಗೆ ಸಂಖ್ಯಾ ಬಲ ಇದೆ, ರಾಜಕೀಯ ಸಾಮರ್ಥ್ಯತೆ ಇದೆ, ಸರ್ಕಾರ ಉತ್ತರ ಕೊಡುವುದಕ್ಕೂ ಸಿದ್ಧವಿದೆ, ಯಾವುದೇ ರೀತಿಯಾದಂಥ ಚರ್ಚೆ ಮಾಡುವುದಕ್ಕೆ ಸಿದ್ಧವಿದೆ ಎಂದು ಉಪ ನಾಯಕರು ಬಹಳ ಚೆನ್ನಾಗಿ ಹೇಳಿದರು. ಆದರೆ ವಿರೋಧ ಪಕ್ಷಗಳು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಅವರು ಚರ್ಚೆ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದರೆ ಹೇಗೆ? ಮಾನ್ಯ ಅಧ್ಯಕ್ಷರೆ, ತಮಗೆ ಉದಾಹರಣೆಗೆ ಹೇಳುವುದಾದರೆ, ಅಡಜರ್ನ್‌ಮೆಂಟ್ ಮೋಷನನನ್ನು ತಾವು ಡಿಸ್ ಅಲೋ ಮಾಡಿದಿರಿ. ಅದನ್ನು ನಾವು ನೋಡಿದ್ದೇವೆ. ನ್ಯಾಯಾಂಗ ತನಿಖೆ, ಸಿಬಿಐ ತನಿಖೆ, ಯಾವುದೇ ತನಿಖೆಗೆ ನಾವು ಸಿದ್ಧ ಎಂದು ಮಾನ್ಯ ಸಭಾನಾಯಕರು ಹೇಳಿದರು. ಆಗ ವಿರೋಧಪಕ್ಷದವರು ಏನನ್ನೂ ಕೇಳಲಿಲ್ಲ. ರೂಲಿಂಗ್ ಕೊಟ್ಟಮೇಲೆ ಹೊರಗಡೆ ಹೋಗಿ ನಮಗೆ ತನಿಖೆ ಬೇಡ

ಮುಖ್ಯಮಂತ್ರಿಗಳ ರಾಜಿನಾಮೆ ಬೇಕು ಎಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು. ಇದೇನು ರಾಜರಾಜೇಶ್ವರಿ ಕಲ್ಯಾಣ ಮಂಟಪವೇ? ಒಂದು ಸಾರಿ ಹೆಣ್ಣು ಕರೆದುಕೊಂಡು ಬರುವುದು, ಒಂದು ಸಾರಿ ಗಂಡು ಕರೆದುಕೊಂಡು ಬರುವುದು, ಒಂದು ಸಾರಿ ಹೊರಗಡೆ ಹೋಗುವುದು, ನಾವು ವಿಧಾನಸಭೆಯನ್ನು ರಾಜರಾಜೇಶ್ವರಿ ಕಲ್ಯಾಣ ಮಂಟಪ ಮಾಡುವುದಕ್ಕೆ ಆಗುವುದಿಲ್ಲ. ನಿಯಮಾವಳಿ ಇದೆ. This House represents the people of the State.

ಅತ್ಯಂತ ಗಂಭೀರವಾದ, ಜವಾಬ್ದಾರಿಯುತವಾದ ದೇವಾಲಯ ಇದು. ಜನಗಳು ಅಧಿಕಾರವನ್ನು ನಮಗೆ ಕೊಟ್ಟಿರುವವರು. ಆದ್ದರಿಂದ ತಾವು ಅಲ್ಲಿ ಕುಳಿತಿರುವುದರಿಂದ ದಯವಿಟ್ಟು ನಾನು ಸದನ ನಡೆಸಿ ಎಂದು ಹೇಳುವುದಿಲ್ಲ. ವಿರೋಧ ಪಕ್ಷದವರಿಗೆ ಅವಕಾಶ ಕೊಡಿ ಎಂದು ನಮ್ಮ ಉಪ ನಾಯಕರು ಹೇಳಿದರು. ಆದರೆ ನಮ್ಮ ತಾಳ್ಮೆಯನ್ನು ಅವರು ಪರೀಕ್ಷೆ ಮಾಡುವುದು ಬೇಡ. ಆದ್ದರಿಂದ ತಾವು ಒಂದು ಸಮೀಕ್ಷೆ ಮಾಡಿ ದಯವಿಟ್ಟು ತಿಳಿಸಬೇಕು; ಆ ಸಮೀಕ್ಷೆ ಬರಬೇಕು ಜನರು ಅದನ್ನು ಓದಬೇಕು. ತಾವು ದಯವಿಟ್ಟು ದೂರದರ್ಶನದವರಿಗೆ ಬರೆದು ಆಡಳಿತಪಕ್ಷದವರು, ವಿರೋಧ ಪಕ್ಷದವರ ನಡವಳಿಕೆಗಳನ್ನು ಜನ ಕಣ್ಣಿನಿಂದ ನೋಡಲಿ. ಪತ್ರಿಕೆಯಲ್ಲಿ ಬರೆಯುತ್ತಾರೆ. ಜನರು ಕಣ್ಣಿನಿಂದ ನೋಡುವಂತಾಗಲು ಮುಂದಿನ ಅಧಿವೇಶನದಲ್ಲಿ ತಾವು ಅವಕಾಶವನ್ನು ಮಾಡಬೇಕೆಂದು ಹೇಳಿ ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮ ರೆಡ್ಡಿ : ಮಾನ್ಯ ಅಧ್ಯಕ್ಷರೆ, ನಾವು ಸದನವನ್ನು ನಡೆಸಬೇಕೆಂದು ಹೇಳಿ ಒತ್ತಾಯ ಮಾಡಿ ಧರಣಿ ಕುಳಿತುಕೊಳ್ಳುತ್ತಾ ಇದ್ದೇವೆ.

(ಈ ಹಂತದಲ್ಲಿ ಮಾನ್ಯ ಸದಸ್ಯರುಗಳಾದ ಶ್ರೀ ರಾಮರೆಡ್ಡಿ ಜಿ.ವಿ - ಸಿಪಿಎಂ ಪಾರ್ಟಿ

ಬಿ. ಮುನಿಯಪ್ಪ - ಎಐಡಿಎಂಕೆ ಪಾರ್ಟಿ

ಸೈಯ್ಯದ್ ಜುಲ್ಫೀಕರ್ ಹಷ್ಮಿ - ಬಿಎಸ್‌ಪಿ

ಎಲ್.ಆರ್. ಶಿವರಾಮೇಗೌಡ - ಪಕ್ಷೇತರರು

ಇವರುಗಳು ಸದನದ ಬಾವಿಯಲ್ಲಿ ಧರಣಿ ಕುಳಿತರು)

ಶ್ರೀ ಎಲ್.ಆರ್. ಶಿವರಾಮೇಗೌಡ : ಸನ್ಮಾನ್ಯ ಸಭಾಧ್ಯಕ್ಷರೆ, ಈಗ ಏನಾಗಿದೆ ಎಂದರೆ, ಮಾನ್ಯ ನಾಗೇಗೌಡರು ಹೇಳಿದ ರೀತಿ ಈ ಸದನ ಹೇಗೆ ನಡೆಯುತ್ತದೆ ಎನ್ನತಕ್ಕಂಥ ವಿಚಾರವನ್ನು ಜನ ನೋಡಬೇಕು. ಆದರೆ ನಾವು ಏನು ಮಾಡುತ್ತೇವೆ ಎಂದರೆ ಮನೆಯಲ್ಲಿ ಎದ್ದು ಜನಗಳಿಗೆ ಯಾರಿಗೂ ನಾವು ಸಿಕ್ಕದೆಯೇ ವಿಧಾನಸೌಧಕ್ಕೆ ಹೋಗಬೇಕೆಂದು ಇಲ್ಲಿಗೆ ಬರುತ್ತೇವೆ. ಮತ್ತು ಇಲ್ಲಿ ಏನು ನಡೆಯುತ್ತದೆ ಎನ್ನುವುದನ್ನು ಸಹಿತ ನಾವು ನೋಡಬೇಕು. ಏಕೆಂದರೆ ನಮಗೂ ಸಹಿತ ವಿರೋಧ ಪಕ್ಷದಲ್ಲಿ ಕುಳಿತು ಕೆಲಸಮಾಡಬೇಕು, ಅಥವಾ ಸರ್ಕಾರ ಏನು ತಪ್ಪು ಮಾಡುತ್ತಿದೆ ಎನ್ನುವುದನ್ನು ಎಚ್ಚೆತ್ತು ಹೇಳುವುದಕ್ಕೆ ಅವಕಾಶ ಇಲ್ಲದೇ ಇರುವ ಸಂದರ್ಭದಲ್ಲಿ ಈ ಸದನ ನಡೆಯಬೇಕೆಂದು ಹೇಳಿ

ನಾನು ಕೂಡ ಸ್ನೇಹಿತರ ಒಡಗೂಡಿ ಅವರಿಗೆ ಬೆಂಬಲ ಸೂಚಿಸುವುದಕ್ಕೋಸ್ಕರ ಧರಣಿ ಕೂರುತ್ತೇನೆ.

ಶ್ರೀ ಎನ್. ರಾಜಣ್ಣ : ಅಧ್ಯಕ್ಷರೆ, xxxxx

ಅಧ್ಯಕ್ಷರು : ರೆಕಾರ್ಡ ಮಾಡಬೇಡಿ. Whatever spoken may be expunged.

(xxxxx Expunged as ordered by the chair).

ಅಧ್ಯಕ್ಷರು : ಬಂಗಾರಪ್ಪನವರೆ, ನಿಮ್ಮ ಪಕ್ಷದ ಪರವಾಗಿ ಮಾನ್ಯ ಸಭಾಪತಿಯವರು ನಿಮ್ಮ ಪಕ್ಷದ ನಿಲುವನ್ನು ಹೇಳಿದ್ದಾರೆ. ಏನಾದರೂ ಹೇಳುವುದಿದೆಯೇ.

+ ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೆ, ಸದನದ ಕಾರ್ಯಕಲಾಪಗಳನ್ನು ನಡೆಸಬೇಕೆಂದು ಹೇಳಿ ಜನ ಆರಿಸಿ ವಿವಿಧ ರಾಜಕೀಯ ಪಕ್ಷಗಳ ಮಿತ್ರರವನ್ನು ಕಳುಹಿಸಿಕೊಟ್ಟಿದ್ದಾರೆ. ಧರಣಿ ಸಭಾತ್ಯಾಗ ಅಥವಾ ಸದನ ಬಹಿಷ್ಕಾರ ಇದು ನಮ್ಮ ಸದನಕ್ಕೆ ಅಲ್ಲ. ಪಾರ್ಲಿಮೆಂಟನಲ್ಲೂ ಕೂಡ ಒಳಗೊಂಡಂತೆ ರಾಷ್ಟ್ರದ ಹಲವಾರು ಶಾಸನಸಭೆಗಳಲ್ಲಿ ಇಂತಹ ಘಟನೆಗಳು ನಡೆದಿವೆ. ಅದು ಕಾನೂನು ಪ್ರಕಾರ ಸರಿ ಎನ್ನತಕ್ಕಂಥ ವಾದವನ್ನು ಯಾರು ಕೂಡ ಮಾಡುವುದಕ್ಕೆ ಆಗುವುದಿಲ್ಲ. ಒಂದೇ ಒಂದು ವಿಷಯ ಅಂದರೆ, ಆಯಾಯ ರಾಜಕೀಯ ಪಕ್ಷಗಳ ನೀತಿಗೆ ಸಂಬಂಧಪಟ್ಟ ವಿಚಾರ. ಅದರ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಪ್ರತಿಯೊಂದು ರಾಜಕೀಯ ಪಕ್ಷಕ್ಕೂ ಕೂಡ ಅವರದೇ ಆದಂಥ ನೀತಿ, ಅವರದೇ ಕಾರ್ಯಕ್ರಮ, ಅವರದೇ ನೋಡತಕ್ಕಂಥ ದೃಷ್ಟಿಕೋನಗಳು, ಸಮಸ್ಯೆಗಳಾಗಿ ಪರಿಹಾರ ಅವೆಲ್ಲಾವುಗಳ ಕೂಡ ಅವರಿಗೆ ಇರುತ್ತದೆ. ಈ ಸಂದರ್ಭದಲ್ಲಿ ಒಂದೇ ಒಂದು ಹೇಳತಕ್ಕಂಥದ್ದು ಏನೆಂದರೆ, ಬಹಿಷ್ಕಾರ ಹಾಕುವುದು ಬಿಡುವುದು ಅವರಿಗೆ ಬಿಟ್ಟಿರತಕ್ಕಂಥಾದ್ದು. ಮಾನ್ಯ ಕಾಂಗ್ರೆಸ್-ಐ ಪಕ್ಷದ ಮಿತ್ರರು, ಬಿಜೆಪಿ ಇತ್ಯಾದಿಯವರು ಯಾರೇ ಇರಬಹುದು. ವಿವರಗಳಿಗೆ ನಾನು ಹೋಗುವುದಿಲ್ಲ. ಆದರೆ ಒಂದು ಮಾತನ್ನು ನಾನು ಸ್ಪಷ್ಟವಾಗಿ ಹೇಳಲೇಬೇಕಾಗುತ್ತದೆ. ನಾವು ಬಹಳ ಸೀನಿಯರ್ ಮೆಂಬರ್ಸ, ಎನ್ನತಕ್ಕಂಥ ಮಾತನ್ನು ಹೇಳಿಕೊಂಡು ಮಾತನಾಡತಕ್ಕಂಥ ಅವಶ್ಯಕತೆ ಏನೂ ಇಲ್ಲ. ಹಕ್ಕಿನ ದೃಷ್ಟಿಯಿಂದ ಹಿರಿಯ ಮಾನ್ಯ ಸದಸ್ಯಿಗೆ ಇಲ್ಲಿ ಎಷ್ಟು ಹಕ್ಕು ಇದೆಯೋ ಈಗತಾನೆ ಆಯ್ಕೆಯಾಗಿ ಬಂದಿರತಕ್ಕಂಥ ಮಾನ್ಯ ಸದಸ್ಯರಿಗೂ ಕೂಡ ಅಷ್ಟೇ ಹಕ್ಕು ಇದೆ. ಅಷ್ಟೇ ವಿಷಯವನ್ನು ಗೃಹಿಕೆ ಮಾಡತಕ್ಕಂಥ ಅವಕಾಶ ಕೂಡ ಅವರೆಲ್ಲರಿಗೂ ಕೂಡ ಇರತಕ್ಕಂಥದ್ದು. ನಾವು ಅದನ್ನು ಬಹಳ ಗೌರವಯುತವಾಗಿ ಕಾಣುತ್ತೇವೆ. ಯಾವುದೇ ಪಕ್ಷದವರು ಇರಬಹುದು, ಮಾನ್ಯ ಮಿತ್ರರು ಇರಬಹುದು. ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುವಂಥಾದ್ದು ಏನೆಂದರೆ ಇವತ್ತು ನಾವು ಆಯ್ಕೆಯಾಗಿ ಇಲ್ಲಿಗೆ ಬಂದಮೇಲೆ ನಮ್ಮ ವಿಚಾರವನ್ನು ಹೇಳುವುದಕ್ಕೆ ಇತಿಮಿತಿಗೆ ಒಳಪಟ್ಟೇ ಒಂದು ರಾಜಕೀಯ ಪಕ್ಷ ಅಥವಾ ಒಬ್ಬ ಅಭ್ಯರ್ಥಿ ಮಾನ್ಯ ಸದಸ್ಯರಾಗಿ ಈ ಸದನದಲ್ಲಿ ಹೇಳಬೇಕಾಗುತ್ತದೆ. ಇದೇ ರಾಸುದೇವನ್ ವಿಷಯದ ಬಗ್ಗೆ ಧರಣಿ ಆಯಿತು, ಸಭಾತ್ಯಾಗಗಳು ಆದವು, ಅಂತಿಮವಾಗಿ ಬಹಿಷ್ಕಾರ ಇತ್ಯಾದಿಗಳನ್ನು ನಾವು ಪತ್ರಿಕೆಯಲ್ಲಿ ಓದಿ ತಿಳಿದುಕೊಂಡಿರತಕ್ಕಂಥದ್ದು. ನಾನು ಈ ಸಂದರ್ಭದಲ್ಲಿ ಪದೇ ಪದೇ ಅಭಿನಂದಿಸುತ್ತಾ ಇದ್ದೇನೆ ಮಾನ್ಯ ಸಭಾಧ್ಯಕ್ಷರೆ, ಏನಾದರೂ ಮಾಡಿ ಸದನದ ಕಾರ್ಯಕಲಾಪಗಳು ಸುಗಮವಾಗಿ ನಡೆಯಬೇಕು. ಈ ಸದನದ ಎಲ್ಲಾ ರಾಜಕೀಯ ಪಕ್ಷಗಳು ಅಥವಾ ಖಾಸಗಿ ಮಾನ್ಯ

ಸದಸ್ಯರು ಇವರ ಸಹಕಾರ ಬೆಂಬಲವನ್ನು ಪಡೆದೇ ಸದನದ ಕಾರ್ಯಕಲಾಪಗಳನ್ನು ನಡೆಸಬೇಕೆನ್ನುವುದು ತಮ್ಮ ಸದಿಚ್ಛೆ.

12.00 ಪಿ.ಎಂ.

ನಾನು ಅದನ್ನು ಹೃದಯಪೂರ್ವಕವಾಗಿಯೇ ಅಭಿನಂದಿಸುತ್ತೇನೆ. ವಿಚಾರದಲ್ಲಿ ಮಾತ್ರ ತಾವು ಅಧ್ಯಕ್ಷರಾಗಿ ಕೊಟ್ಟಿರತಕ್ಕಂತಹ ಅವಕಾಶಗಳು, ಇವತ್ತಲ್ಲ, ಎಷ್ಟೋ ಸಾರಿ ಹೇಳಿದ್ದೇನೆ. ಸದನದಲ್ಲಿ ಒಂದು ಸಾರಿ ತೆಗೆದುಕೊಳ್ಳಲಾರದೆ ಪ್ರಸ್ತಾಪ ಮಾಡಿದೆ. 1967ರಿಂದ ನಾನು ನೋಡುತ್ತಾ ಬಂದಿದ್ದೇನೆ. ಶ್ರೀಮಾನ್ ವೈಕುಂಠ ಬಾಳಿಗರವರ ಕಾಲದಿಂದ ತಮ್ಮ ಕಾಲದವರೆಗೂ ಬೇರೆಯವರು ಅವಕಾಶ ಕೊಟ್ಟಿಲ್ಲ ಎನ್ನತಕ್ಕಂತಹ ಮಾತನ್ನು ನಾನು ಆಡುತ್ತಿಲ್ಲ. ಆದರೆ ತಮ್ಮ ಕಾಲದಲ್ಲಿ ಅತ್ಯಂತ ಗೌರವ, ಅವಕಾಶಗಳು, ಪಕ್ಷ ಭಿನ್ನಭೇದ ಭಾವ, ಆ ಕಡೆ, ಈ ಕಡೆ ಏನೇನೂ ನೋಡದೆ, ಅದರಲ್ಲೂ ಕೂಡ ವಿರೋಧಪಕ್ಷಗಳಿಗೆ ಹೆಚ್ಚಾಗಿ ಕಾಲವನ್ನು ತಾವು ಕೊಟ್ಟಿರತಕ್ಕಂತಹದ್ದು ನನ್ನ ಅನುಭವದಲ್ಲಿ ನಾನು ಕಣ್ಣಾರೆ ಕಂಡಿರತಕ್ಕಂತಹದ್ದು. ಇವತ್ತು ನಾವೂ ವಿರೋಧ ಪಕ್ಷದಲ್ಲಿ ಕುಳಿತುಕೊಂಡಿದ್ದೇವೆ. ನಮ್ಮ ಪಕ್ಷದ ನೀತಿ ಏನು? ತೀರ್ಮಾನ ಏನು ಎಂಬುದು ನಮಗೆ ಬಿಟ್ಟಿರತಕ್ಕಂತಹ ವಿಚಾರ. ಅದನ್ನು ನಾನು ಪ್ರತಿಪಾದನೆ ಮಾಡುತ್ತೇನೆ. ನಾವು ಸಭಾತ್ಯಾಗ ಮಾಡಬಾರದು, ಧರಣಿ ಮಾಡಬಾರದು ಇತ್ಯಾದಿ ಈ ವಿಚಾರದಲ್ಲಿ ನಾವು ತೀರ್ಮಾನ ಮಾಡಿದ್ದೇವೆ. ಇಂತಹ ವಿಚಾರದಲ್ಲಿ ಕುಳಿತುಕೊಳ್ಳತಕ್ಕಂತಹದ್ದಲ್ಲ. ಸಂದರ್ಭ ಬಂದರೆ, ಗಹನವಾಗಿ ರಾಜ್ಯ-ರಾಷ್ಟ್ರದ ವಿಚಾರ ಬಂದಾಗ ಬಡವರ ವಿಚಾರ ಬಂದಾಗ ಅಷ್ಟೊಂದು ಪ್ರಾಮಾಖ್ಯತೆಯ ವಿಚಾರ ಬಂದಾಗ ಆ ಸಂದರ್ಭ ನೋಡಿ ಮಾಡೋಣ. ಆದರೆ ಆ ಅಸ್ತ್ರ ಅದು ಅಂತಿಮವಾಗಿ ಇರಬೇಕೇ ವಿನಃ ಆ ಅಸ್ತ್ರ ಅದೊಂದು ದೈನಂದಿನ ಕಾರ್ಯಕ್ರಮ ಆಗಬಾರದು. ಅದೊಂದು ದೈನಿಂದಿನ ಕಾರ್ಯಕ್ರಮ ಆದರೆ,

It will lose all its importance. ಆಯಿತು, ಧರ್ಣ, ಸಭಾತ್ಯಾಗ, ಬಹಿಷ್ಕಾರ; ಇನ್ನೇನು ಉಳಿದಿದೆ ಎಂಬುದು ನನಗಂತೂ ಗೊತ್ತಾಗುವುದಿಲ್ಲ. ಒಬ್ಬ ಮಾನ್ಯ ಸದಸ್ಯರು ಅಥವಾ ರಾಜಕೀಯ ಪಕ್ಷ ಏನು ಹಾಕಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ? ನಾನು ಬಿ.ಜೆ.ಪಿ, ಕಾಂಗ್ರೆಸ್(ಐ) ಕೆಲವು ಮಾನ್ಯ ಸದಸ್ಯರಿಗೆ ಗೌರವದಿಂದ ಈ ಮಾತನ್ನು ಹೇಳತ್ತಿದ್ದೇನೆ; ಅವನಿಗೆ ವಿನಂತಿ ಮಾಡುತ್ತೇನೆ. ಸರ್ಕಾರದ ಪರವಾಗಿ ಸಭಾನಾಯಕರು ವಿನಂತಿ ಮಾಡಿದ್ದಾರೆ. I am not holding any brief for the Government. I am not concerned. But as the Leader of the House ಇವತ್ತು ಉಪ ನಾಯಕರಾಗಿ ಮಾನ್ಯ ಜೆ.ಎಚ್. ಪಟೇಲರವರೂ ಕೂಡ ನಾನು ಬರುವುದಕ್ಕಿಂತ ಮುಂಚೆ ಹೇಳಿದಿರಿ ಎಂದು ಕಾಣುತ್ತದೆ. ಇನ್ನೇನು ಮಾಡಬೇಕೋ ನನಗೆ ಗೊತ್ತಾಗುವುದಿಲ್ಲ. ತಮ್ಮ ಔದಾರ್ಯ ನಿಜವಾಗಿಯಾ ಬಹಳ ದೊಡ್ಡದು. ತಮ್ಮ ಕೊಠಡಿಯಲ್ಲಿ ಏನಾದರೂ ಮಾಡಿ ಅದಕ್ಕೊಂದು ಪರಿಹಾರ ನೋಡಿ, ಸರಿಪಡಿಸಿಕೊಂಡು ಹೋಗೋಣ ಅನ್ನತಕ್ಕಂತಹುದು ವಿಚಾರ. ಇವತ್ತು ತಮ್ಮದೇ ಆದ ವಿಚಾರಧಾರೆ ಅವರು ಹೊಂದಿದ್ದಾರೆ, ಸರ್ಕಾರ ನಡೆಸತಕ್ಕಂತಹವರು ಅವರು ತಮ್ಮ ವಿಚಾರಧಾರೆ ಹೊಂದುವುದಕ್ಕೆ ಕೆಲವು ಕಾರಣಗಳು ಅಲ್ಲಿ ಅಡ್ಡ ಬರುತ್ತಿವೆ ಎನ್ನತಕ್ಕಂತಹ ಅಭಿಪ್ರಾಯ ಇಟ್ಟೇ ಅವರೂ ಕೂಡ

ಹೇಳಿದ್ದಾರೆ. ನಾನು ವಿವರಗಳಿಗೆ ಹೋಗುವುದಿಲ್ಲ. ಏಕೆಂದರೆ, ತಮ್ಮ ಕೊಠಡಿಯಲ್ಲಿ ಏನು ನಡೆದಿದೆ ಆ ವಿವರಗಳನ್ನು ಇಲ್ಲಿ ಹೇಳಿದರೆ ಅದು ತಪ್ಪಾಗುತ್ತದೆ.

ಶ್ರೀ ಜೆ.ಎಚ್. ಪಟೇಲ್ : ತಾವು ಹೇಳುವವರೆಗೆ ನಾವು ಕಾಯುತ್ತೇವೆ. ಅವರು ಹಠ ಮಾಡಿದರೆ, ಸರ್ಕಾರ ಹೇಗೆ ನಡೆಸಬೇಕೆಂಬ ಶಕ್ತಿಯೂ ಇದೆ, ಬುದ್ಧಿಯೂ ಇದೆ ಎರಡೂ ಇದೆ. ಮಾಡಿಕೊಂಡು ಹೋಗುತ್ತೇವೆ. ಆದರೆ ತಮ್ಮ ಮಾರ್ಗದರ್ಶನ ಬೇಕು. ಜನತೆಗೆ ಅದು ತಿಳಿಯಬೇಕು. ಇವತ್ತು ನಾವು ಎಲ್ಲ ಉತ್ತರ ಕೊಡುವುದಕ್ಕೆ ತಯಾರಿದ್ದೇವೆ. ಆದರೆ ಅವರು ಹಠಮಾಡಿದರೆ, ಅದರ ಬಗ್ಗೆ ತಾವೇ ತೀರ್ಮಾನ ಮಾಡಬೇಕು ಎಂದು ಹೇಳಿದ್ದೇನೆ.

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ತಮ್ಮಲ್ಲಿ ವಿನಂತಿ ಮಾಡುವುದು ಇಷ್ಟೆ ತಮ್ಮಲ್ಲಿ ಏನು ಔದಾರ್ಯದ ಗುಣ ಇದೆ, ಅದನ್ನು ಸದುಪಯೋಗಪಡಿಸಿಕೊಳ್ಳತಕ್ಕ ಬುದ್ಧಿ ನಮಗೆ ಬೇಕಾಗುತ್ತದೆ. ನಾನು ಅಷ್ಟು ಮಾತ್ರ ಹೇಳುತ್ತೇನೆ. ಇನ್ನೊಬ್ಬರ ಮೇಲೆ ಹೇಳುವುದಕ್ಕೆ ನನಗೆ ಆಸೆ ಇಲ್ಲ. ನಮಗಂತೂ ಬೇಕು. ಏಕೆಂದರೆ, ನೀವು ಕೊಡತಕ್ಕಂತಹ ಅವಕಾಶಗಳು ಮತ್ತೊಂದು, ಹಕ್ಕನ್ನು ಎತ್ತಿಹಿಡಿಯತಕ್ಕಂತಹದ್ದು, ಆ ವಿಚಾರಧಾರೆ ನೋಡಿದರೆ, 1967ರಿಂದಲೂ ಇಂತಹ ಅಧ್ಯಕ್ಷರು ಸಿಕ್ಕಬೇಕಾಗಿತ್ತು ಎನ್ನುವ ಆಸೆ ನನಗೆ ಒಂದೊಂದು ಸಾರಿ ಬಂದದ್ದು ಉಂಟು. ನನ್ನ ಸ್ನೇಹಿತರಿಗೂ ಎಷ್ಟೋ ಸಾರಿ ಇಲ್ಲಿ ಹೇಳಿದ್ದೇನೆ. ಆದ್ದರಿಂದ ಇವತ್ತು ಪಕ್ಷದ ಪ್ರತಿಪಾದನೆ, ಶ್ರೀಮಾನ್ ವಾಸುದೇವನ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ವಿವರಗಳಿಗೆ ಹೋಗುವಂತಹ ಹಂತವನ್ನು I think we have crossed that stage ಎಂದು ನನಗನ್ನಿಸುತ್ತದೆ. Right or wrong there is a judgment passed or an order passed by the highest Court of the country, Apex Court of the Country. Can you just by sitting here start questioning all those things? ಸದನದ ಸಮಿತಿಯನ್ನು ಮಾಡಿದರೂ ಕೂಡ House Committee you cannot go into the details of the judgment, merits and demerits of the matter. You cannot. You have no authority at all. ಅದೂ ಕೂಡ ನಾಳೆ ನಾವು ಮಾತನಾಡುವುದಕ್ಕೆ ಹೋದರೆ, ಇಲ್ಲಿ ತಮಗೂ ಕೂಡ ಸದನ ನಡೆಸತಕ್ಕಂತಹದ್ದು ನಿಯಾಮಾವಳಿಗಳ ಪ್ರಕಾರ ಬಹಳ ಕಷ್ಟವಾಗುತ್ತದೆ. ಅದನ್ನು ಮಾನ್ಯ ಮಿತ್ರರು ಅರಿಯಬೇಕಾಗಿತ್ತು ಎಂಬುದು ನನ್ನ ಭಾವನೆ. ಇವತ್ತು ಸಮಿತಿ ಮಾಡಿದರೆ, Circumstances of the case leading to the Supreme Court to pass such a kind of order or judgment. ಎನ್ನತಕ್ಕಂತಹ ವಾದ. ಆದ್ದರಿಂದ ನಾವು ಅದಕ್ಕೆ ಹೋದಾಗ circumstances leading to what? To pass such an order by the Supreme Court. Then you are not going to sit in judgment over the Order passed by the Supreme Court, in case a House Committee is constituted. Legally I am speaking it. Have you got that authority? Afterall, we are the creators of the Supreme Court or the judiciary the country. ನಾವೇ ಮಾಡಿದ್ದೇವೆ.

ನಾವೇ ಮಾಡಿಬಿಟ್ಟು ಅಪೆಕ್ಸ ಕೋರ್ಟು ಎಂದು ಹೇಳಿ, ನಾವೇ ಕೋರ್ಟಿನವರ್ ಆರ್ಡರ್ ಬಗ್ಗೆ ಸ್ವಲ್ಪ ಅದನ್ನು ಮಾನವೀಯತೆ ದೃಷ್ಟಿಯಿಂದ ನೋಡಬೇಕಾಗಿತ್ತು ಏಕೆಂದರೆ, ಸುಪ್ರೀಂ ಕೋರ್ಟಿನ ಆದೇಶ ಆದ ಮೇಲೆ There is no apellate authority at all over and above the Apex Authority of the country.

ಅದು ಇಲ್ಲ. ಇದನ್ನು ನೋಡಿಯೇ ಅವರು ನೋಡಬೇಕಾಗಿತ್ತು ಎಂಬುದಾಗಿ ನನ್ನ ಮನಸ್ಸಿಗೂ ಅನ್ನಿಸಿತು. ನಾನು ಈಗತಾನೆ ಒಬ್ಬ ಟಿ.ವಿ.ಯವರ ಜೊತೆ ನಡೆದ ಸಂದರ್ಶನ ಸಮಯದಲ್ಲಿ ಅದನ್ನು ಹೇಳಿದ್ದೇನೆ. ಇದನ್ನು ಮಾನವೀಯತೆಯ ದೃಷ್ಟಿಯಿಂದ ನೋಡಬೇಕಾಗಿತ್ತು. ಮತ್ತೆ ಏಕೆ ಬಂದಿದ್ದಾರೆ ಎಂಬುದನ್ನು ನೋಡಬೇಕಾಗಿತ್ತು. ಇದೇನು ದೊಡ್ಡ ವಿಷಯ ಅಲ್ಲ. ಒಂದು ಸಾರಿ ಹೇಳಿದ್ದರೆ, ಅದೇನೂ ಆಗುತ್ತಿರಲಿಲ್ಲ ಎನ್ನುವ ಅಭಿಪ್ರಾಯವನ್ನು ನಾನು ಪಟ್ಟೆ. But anyway, it is left to the Supreme Court. I have no comments to offer on the judgment passed by the Supreme Court ಅನ್ನುವ ಮಾತನ್ನು ನಾನು ಹೇಳಿಕೊಂಡೆ But still my conscious is repeatedly telling me that the Officer should have been exonerated by the Supreme Court or the Apex Court of the country ಮಾಡಲಿಲ್ಲ. ಮಾಡಲಿಲ್ಲ ಅಂದರೆ ನಾವು ಏನು ಮಾಡುವುದಕ್ಕಾಗುವುದಿಲ್ಲ. The only course open for the government or the person concerned is to go through a mercy petition to the President of this country under Constitution itself. ಅದಕ್ಕೆ ಹೋಗಿ ಆಗಿದೆ. I still learn that the matter is still pending disposal by the President of the country. ಅವರು ಮುಂದೆ ಏನು ಮಾಡುತ್ತಾರೋ ಅದು ನನಗೆ ಗೊತ್ತಿಲ್ಲ. ಆದರೆ ಈಗಲಾದರೂ ಅವರು ಅದನ್ನು ಮಾಡಿದರೆ, ಸೆಂಟೆನ್ಸ ಏನಾದರೂ ಇರಲಿ, ಆ ಬ್ಲಾಕ್ ಮಾರ್ಕ on that gentleman's character ಅದು ಹೊರಟು ಹೋಗುತ್ತದೆ. ಅದು ಒಳ್ಳೆಯದಲ್ಲ ಎನ್ನುವ ಭಾವನೆ ನನ್ನ ಮನಸ್ಸಿಗೂ ಬರುತ್ತಿದೆ. ಈಗಲೂ ಕೂಡ ಅದನ್ನು ಮಾಡಬೇಕು. Afterall he is a person who worked in the Secretariat or Department directly under the Prime Minister. Something like that. All these matters, I am not casting any aspersions or offering any comments even on Government of India because this is the stage where we will have to look through all the matter on humanitarian grounds, including Government of India, apart from the Supreme Court of the country and President of India.

ಇದಕ್ಕೆ ಕನ್ಸರ್ನ್ ಇದ್ದವರು ಏನಾದರೂ ಮಾಡಿ ಈಗಲೂ ಕೂಡ ಅದನ್ನು ಸರಿಮಾಡುವುದಕ್ಕೆ ಹೋಗದೆ ಇದ್ದರೆ, ಆ ಜೈಲಿನಲ್ಲಿ ಕುಳಿತಿರುವ ಆ ವ್ಯಕ್ತಿ ಗತಿ ಏನಾಗಿರಬೇಕು? ಸ್ವಲ್ಪ ಅವರ ಜಾಗದಲ್ಲಿ ನಾನೇ ಇದ್ದಿದ್ದರೆ, ಮತ್ತೊಬ್ಬರು ಇದ್ದಿದ್ದರೆ, ಏನು ಆಗುತ್ತಾ ಇತ್ತು ಎಂಬ ವಿಚಾರವನ್ನು ನಾವು

ಮಾಡುವುದು ಬಹಳ ಒಳ್ಳೆಯದು. ಜೈಲಿನಲ್ಲಿ ಅವರೊಬ್ಬರಲ್ಲ, ಬಹಳ ಜನ ಈ ದೇಶದಲ್ಲಿ ಜೈಲಿನಲ್ಲಿದ್ದಾರೆ. ನಾನು ಆ ಪಾಯಿಂಟಗೋಸ್ಕರ ಹೇಳುತ್ತಾ ಇಲ್ಲ. Having come to know all the facts ಆ ರೀತಿ ಹೋಗಬಾರದು ಎಂದು ಇದ್ದರೂಕೂಡ Though all of us are one, afterall when the leader of the House made the written statement and also added that some kind of oral statement on the floor of the House, actually there is no dispute between the Opposition and the Government here.

ಅದರ ಬಗ್ಗೆ ಮತ್ತೊಂದು ಅಭಿಪ್ರಾಯ ಯಾರ ಬಗ್ಗೆಯೂ ಏನೂ ಇಲ್ಲ. ಇದರಲ್ಲಿ ಇರುವುದು ಏನೆಂದರೆ, ತಪ್ಪು ನೀವು ಮಾಡಿದ್ದೀರಿ ಎಂದು. ತಪ್ಪು ಇವತ್ತು ಈ ಸರ್ಕಾರದ್ದಲ್ಲ. ಇದು ಪ್ರಾರಂಭ ಆಗಿದ್ದು 1978-79 ರಿಂದ.

ಅಧ್ಯಕ್ಷರು : ಕ್ಲೋಸ್ ಮಾಡಿಬಿಡೋಣ. ನಾವು ಆಗಲೇ ಕ್ಲೋಸ್ ಮಾಡಿದ್ದೇವೆ. ಮತ್ತೆ ಓಪನ್ ಮಾಡುವುದು ಏಕೆ ಬೇಕು?

ಶ್ರೀ ಎಸ್. ಬಂಗಾರಪ್ಪ : ನನಗೆ ಅದನ್ನು ಮಾಡುವ ಆಸೆ ಇಲ್ಲ. ಅದಕ್ಕೆ ನಾನು ಹೇಳುವುದು. ಮತ್ತೆ ಅದನ್ನೇ ತೆಗೆದುಕೊಂಡು ಹೋಗುವುದರಿಂದ ಸದನದ ಸಮಿತಿಯಿಂದ ಉಪಯೋಗವಾಗಲಾರದು ಎಂಬುದು ಸ್ಪಷ್ಟವಾಗಿ ನನ್ನ ಹಾಗೂ ನನ್ನ ಪಕ್ಷದ ಅಭಿಪ್ರಾಯ. ಇವತ್ತು ನಮ್ಮ ಮಿತ್ರರು ಧರಣ ಕುಳಿತುಕೊಂಡು ಬಿಟ್ಟಿದ್ದಾರೆ. ಏಕೆಂದರೆ, ಸದನಕ್ಕೆ ಬಹಿಷ್ಕಾರ ಹಾಕುವುದು ಅವರ ಹಕ್ಕಾದರೆ ಇಲ್ಲಿ ನಡವಳಿಕೆಗಳನ್ನು ನಡೆಸಬೇಕೆಂಬುದು ನಮ್ಮ ಹಕ್ಕಿನ ಪ್ರಶ್ನೆ ಇದು. ಬರೀ ಇಲ್ಲಿ ಬಂದು ಕುಳಿತುಕೊಂಡು ಹೋಗುವುದಿಲ್ಲ. ಇವರೆಲ್ಲಾ ಕುಳಿತುಕೊಂಡಿದ್ದಾರೆ. ಈ ಕಡೆ ನಾವೂ ಇದ್ದೇವೆ. ನಮ್ಮ ಪಾರ್ಟಿಯವರು ಧರಣ ನಾವು ನಡೆಸುತ್ತಿಲ್ಲ. ಅದನ್ನು ಹೇಳಬೇಕಾದ ಹಕ್ಕು ನಮಗೆ ಇದೆ. ಧರಣ ಅಂತ ಅಂದರೆ, ತಮ್ಮ ಗಮನವನ್ನು ಇನ್ನೂ ಹೆಚ್ಚಾಗಿ ಸೆಳೆದು ಸ್ವಾಮಿ, ಇದಕ್ಕೆ ಏನಾದರೂ ಮಾಡಬೇಕು ಎಂದು ಹೇಳುತ್ತಿದ್ದೇವೆ. ಇಲ್ಲದಿದ್ದರೆ ಜನ ಏತಕ್ಕಾಗಿ ನಮ್ಮನ್ನು ಕಳುಹಿಸುತ್ತಾರೆ ಎಂಬುದು ನನಗೆ ಅರ್ಥವಾಗದೆ ಇರತಕ್ಕಂತಹ ವಿಚಾರ. ಈ ಸಂದರ್ಭದಲ್ಲಿ ನಿಜ ಹೇಳಬೇಕಾದರೆ, ಸದನದ ಕಾರ್ಯಕಲಾಪಗಳು ನಡೆಯದಿದ್ದರೆ, ಶಾಸನ ಸಭೆಯನ್ನು ಕರೆದದ್ದು ಬರಗಾಲದ ಬಗ್ಗೆ ಚರ್ಚೆ ಮಾಡುವುದಕ್ಕಾಗಿ. ಬರಗಾಲ, ಅದು ಹೋಯಿತು. ಯಾವ ಉದ್ದೇಶಕ್ಕಾಗಿ ಸದನವನ್ನು ಕರೆಯಬೇಕೆಂಬ ಒತ್ತಡ ಈ ಕಡೆಯಿಂದ ಬಂತೋ ಅದು ಹಾಳಾಗಿ ಹೋಯಿತು ಎಂಬುದು ನನ್ನ ಭಾವನೆ. ಐಓಟಿ. We are in the midst of budget session ಡಿಮ್ಯಾಂಡಗಳು ಹಾಗೆಯೇ ಉಳಿದಿದ್ದಾವೆ. ಮೊನ್ನೆ ತಾನೆ ಅನಿವಾರ್ಯವಾಗಿ You are forced to take up that decision to put that demand or several demands for vote of the House. ಅದನ್ನು ತಾವು ಮಾಡಿಬಿಟ್ಟಿದ್ದೀರಿ. ಇನ್ನುಳಿದಿರತಕ್ಕಂತಹ ಅಪ್ರೊಪ್ರಿಯೇಷನ್ ಬಿಲ್ಲು. ಅದನ್ನು I think ನಾಡಿದ್ದೋ ಆಚೆ ನಾಡಿದ್ದೋ ನೀವು ಪಾಸ್ ಮಾಡಲೇಬೇಕಾಗುತ್ತದೆ. ನೀವು ಪಾಸ್ ಮಾಡದಿದ್ದರೆ, How can you run the State administration? I cannot understand ಯಾರೂ ಕೂಡ ಮಾಡುವುದಕ್ಕಾಗುವುದಿಲ್ಲ. ನಾವು

ಕೂಡ ಸರ್ಕಾರವನ್ನು ನಡೆಸಿದ್ದೇವೆ. ಈ ತರಹ ಮಾಡುತ್ತಾ ಹೋದರೆ ಬರುವುದಿಲ್ಲ. And you cannot take the entire House to give that to the control of only some of the Hon'ble Members of this House and then say to whole world, no we are trying to bring all the Parties together

ಅನ್ನತಕ್ಕ ಮಾತನ್ನು ಹೇಳಿದರೆ, ಅದರ ಅರ್ಥ, ಉಳಿದಿಲ್ಲ ಅನ್ನುವುದು ನನ್ನ ಭಾವನೆ.

I must agree with my friends who are sitting here on Dharana. I must support them so far as their views are concerned not for Dharana. I am requesting them to go back to their seats.

ಹೋಗಲಿ, ಹೋಗಿ ಕುಳಿತುಕೊಳ್ಳೋಣ. ಅಧ್ಯಕ್ಷರು ಇದ್ದಾರೆ. ತಮ್ಮ ತೀರ್ಪಿಗೆ ನಾವು ಬಿಡುತ್ತೇವೆ. ತಮ್ಮ ತೀರ್ಪಿನ ಬಗ್ಗೆ ನಾವು ಗೌರವ ಕೊಡುತ್ತೇವೆ. for or against ಅದು ಏನೇ ಇರಬಹುದು. ಅವರು ಕೂಡ ತಮ್ಮ ಸ್ಥಾನಗಳಿಗೆ ಹೋಗಿ ಕುಳಿತುಕೊಳ್ಳಲಿ. ಕುಳಿತುಕೊಂಡು ಸದನದ ಕಾರ್ಯಕಲಾಪ ನಡೆಸಬೇಕು. ಆದರೆ ಮತ್ತೂ ತಾವು ರಾಜಿಗೆ ಕರೆದು ಮಾತುಕತೆ ಮಾಡಿದರೆ : ಇನ್ನು ಮುಂದೆ ನನಗಂತೂ ರಾಜಿಗೆ ಬರುವುದಕ್ಕಾಗುವುದಿಲ್ಲ. ಓಪನ್ ಹೌಸನಲ್ಲಿ ನಾನು ಹೇಳುವ ಹಂತಕ್ಕೆ ಮುಟ್ಟಿದ್ದೇನೆ. ನಾನೂ 67ರಿಂದ ಲೆಕ್ಕ ಹಾಕಿದರೆ ಹತ್ತತ್ತು 30 ವರ್ಷ ಆಗುತ್ತದೆ, ಈ ಸದನದಲ್ಲಿ ಕುಳಿತುಕೊಂಡು. ಆದರೆ, ಧರಣಿ ಮತ್ತೊಂದು ಮಾಡಿದರೆ, ಅದರ ಇತಿಮಿತಿಯೊಳಗೆ ಮಾಡಿದರೆ It gets lot of meaning and weight also.

ಇದು ಏನೂ ಇಲ್ಲ, ಒಂದೇ ವಿಷಯಕ್ಕೆ ಧರಣ ಮತ್ತು ಸಭಾತ್ಯಾಗ ಮತ್ತೊಬ್ಬರು ಯಾರಾದರೂ ಮಾಡಿಬಿಡುತ್ತಾರೆಂದು ಹೀಗೆ ಕುಳಿತುಕೊಂಡು ಬಿಟ್ಟರೆ, ನಾನು ಹೇಳುತ್ತೇನೆ

We come here just to be on-lookers here.

ನಾವು ಹಾಗೆ ಮಾಡುವುದಕ್ಕಾಗುವುದಿಲ್ಲ ಕ್ಷಮಿಸಬೇಕು, ಈ ಸದನ ನಡೆಸಬೇಕಾಗುತ್ತದೆ. We have got every right to participate in the discussion. ಡಿಮ್ಯಾಂಡ್ಸಗೆ ಬರಬೇಕು. ಇವತ್ತು ನಾಳೆ ಸಪ್ಲೋಸ್ ತಾವು ಆಲೊ ಮಡಲಿಲ್ಲವೆಂದು ಇಟ್ಟುಕೊಳ್ಳೋಣ, ಮತ್ತೆ ಮಾತುಕತೆಗೆ ಹೋದಿರಿ, ತಾವೇನು ಮಾಡುತ್ತೀರಿ? We will have to guillotine all the Demands and Appropriation Bill pass ಮಾಡುಬೇಕಾಗುತ್ತದೆ, ಆ ಸದನಕ್ಕೆ ಬೇರೆ ಹೋಗಬೇಕಾಗುತ್ತದೆ. ಹಾಗೆ ಆಗಿಬಿಟ್ಟರೆ ಉಳಿದಿರತಕ್ಕ ಮಾನ್ಯ ಸದಸ್ಯರ ಗತಿ ಏನಾಗಬೇಕು? ಆ ಕಡೆ ಈ ಕಡೆ ಯಾರೇ ಇರಬಹುದು ಆ ಮಾನ್ಯ ಸದಸ್ಯರ ಗತಿ ಏನಾಗುತ್ತದೆ? ದಯವಿಟ್ಟು ಮಾನ್ಯ ಸದಸ್ಯರ ಹಕ್ಕನ್ನು ಸಂಪೂರ್ಣವಾಗಿ ಕಾಯತಕ್ಕ ಜವಾಬ್ದಾರಿ ತಮ್ಮ ಮೇಲಿದೆ. ತಮಗೆ ಗೊತ್ತಿದೆ. ಸಾರ್ ತಮಗೆ ಅಪೀಲ್ ಮಾಡುತ್ತಿದ್ದೇನೆ, ವಿನಂತಿ ಮಾಡುತ್ತಿದ್ದೇನೆ. ಪಶ್ಚಿಮ ಬಂಗಾಳದಲ್ಲಿ ನಡೆಯಿತು, ಸುಮಾರು 29 ದಿವಸ ವಿರೋಧಪಕ್ಷದವರು ಸದನದಿಂದ ಹೊರಗೆ ಹೋಗಿದ್ದರು. ಅಲ್ಲಿ ಹೇಳುವುದು, ಕಾಂಗ್ರೆಸ್ ಗೌರ್ನಮೆಂಟ್

ಇದ್ದಾಗಲೂ ಕೂಡ ವಿರೋಧಪಕ್ಷದವರನ್ನು ಬಿಟ್ಟು ನಾವು ಸದನ ನಡೆಸಿದ್ದೇವೆ. ಎಲ್ಲ ನಡೆದಿವೆ ನನ್ನ ಕಾಲದಲ್ಲಿ ಮಾತ್ರ ನಡೆದಹಾಗೆ ಕಾಣಲಿಲ್ಲ. ಒಂದು ವಾರ ಹೀಗೆ ಮಾಡಿದಾಗ ಏನು ಮಾಡುವುದ್ಕಕಾಗುವುದಿಲ್ಲ. ದಯವಿಟ್ಟು ತಾವು ಇದಕ್ಕೆ ಅವಕಾಶ ಮಾಡಿಕೊಡಬೇಕು. ಏಕೆಂದರೆ ಒಂದು ಸಾರಿ ಹೌಸ್ ಅಡ್ಜರ್ನ್ಡ ಆಗಿ ಮಾತುಕತೆಗೆ ಅಲ್ಲಿ ಹೋಗಿಬಿಟ್ಟರೆ ಗಂಟೆಗಟ್ಟಲೆ ಹೋಗಿ ಸಾಯಂಕಾಲ 4-5 ಗಂಟೆಯಾಗಿ ಇಡೀ ದಿವಸ ಇದು ಹಾಳಾಗಿ ಹೋಗಿಬಿಟ್ಟರೆ ನಾಳೆ ಇದರ ಮೇಲೆ ಪಬ್ಲಿಕ್ ಒಪಿನಿಯನ್ ಬೇರೆ ರೀತಿ ಬಂದೀತು ಎನ್ನತಕ್ಕ ಹೆದರಿಕೆ ನನ್ನ ಮನಸಿನಲ್ಲಂತೂ ಬಂದು ಬಿಟ್ಟಿದೆ. ಈ ಸದನದ ಪರವಾಗಿ, ಎಲ್ಲಾ ಪಕ್ಷಗಳ ಮಾನ್ಯ ಸದಸ್ಯರ ಪರವಾಗಿ ನಾನು ವಿನಂತಿ ಮಾಡುತ್ತೇನೆ.

Hope those hon. Members who have kept themselves out of the purview of the proceedings of this House. As far as the proceedings of this House is concerned ಅವರೂ ಕೂಡ ಮಿಸ್ಟೇಕ್ ಮಾಡಿಕೊಳ್ಳಲಾರರು ಎಂದು ನಾನು ಭಾವಿಸಿದ್ದೇನೆ. May be ಅವರಿಗೆ ಬೇಕಾದಷ್ಟು ಕಾರಣಗಳು ಇರಬಹುದು.

ಆದರೆ ನಮಗೂ ಕೂಡ ಇಲ್ಲಿ ಕಾರಣಗಳು ಇವೆ. ಒಬ್ಬೊಬ್ಬರ ಕಾರಣ ಅವರವರಿಗೆ ಬಿಟ್ಟಿರತಕ್ಕದ್ದು. ದಯವಿಟ್ಟು ತಾವು ಡಿಮಾಂಡ್ಗಳನ್ನು ಚರ್ಚೆಗೆ ತೆಗೆದುಕೊಳ್ಳಬೇಕು. ಬಹಿಷ್ಕಾರ ಹಾಕಿದ್ದನ್ನು ನೋಡಿ ನಾನು ಏನು ತಿಳಿದುಕೊಂಡೆ ಅಂದರೆ ಈಗ ಎಲ್ಲೋ ಕೊಶ್ಚನ್ ಅವರ್ ನಡೆಯುತ್ತಿದೆಯೆಂದು ತಿಳಿದುಕೊಂಡು ಬಿಟ್ಟೆ. ಕ್ಷಮಿಸಬೇಕು, ಅದು ಮಾಡಿದ್ದರೆ ತಾವು ಪ್ರಾಮಾಣಿಕವಾಗಿ ತಮ್ಮ ಎಲ್ಲ ಎಕ್ಸಾಸ್ಟ ಮಾಡಿದ್ದರಿಂದ, ತಪ್ಪು ಯಾರಾದರೂ ಕೂಡ ಬರುವುದಿಲ್ಲ ಸಾರ್. ದಯವಿಟ್ಟು ನಾನು ವಿನಂತಿ ಮಾಡುತ್ತಿದ್ದೇನೆ, ಇದಕ್ಕೆಲ್ಲ ಅವಕಾಶಕೊಟ್ಟು ಅಜೆಂಡಾ ಪ್ರಕಾರ ನಾವು ಹೊರಟುಹೋಗೋಣ. ಕೊಶ್ಚನ್ ಅವರ್ ಮತ್ತೊಂದು ಅದು ಏನೇನು ಬರಬೇಕು, ನಾವು ಡಿಮ್ಯಾಂಡ್ಸ ಬಗ್ಗೆ ಭಾಷಣ ಮಾಡಬೇಕು. ನಾನೇ ಮತ್ತೊಂದು ಇದಾವೆ ಉದ್ದುದ್ದ ಡಿಮ್ಯಾಂಡ್ಸ ಎಲ್ಲ ನೀವು ಹಾಕಿ ಮನೆಗೆಲ್ಲ ಕಳುಹಿಸಿ ಕೊಟ್ಟಿದ್ದೀರಿ. ಈ ರೀತಿ ನೀವು ಕಳುಹಿಸಿ ಹೀಗೆ ಕುಳಿತುಕೊಂಡರೆ ಹೇಗೆ? ಅವರು ಬರಬೇಕು ಎಂದು ಈಗಲೂ ಕೂಡ ನಾನು ಅವರಲ್ಲಿಯೂ ವಿನಂತಿ ಮಾಡುತ್ತೇನೆ. ದಯವಿಟ್ಟು ಆ ಬಹಿಷ್ಕಾರವನ್ನು ಇಲ್ಲಿಗೆ ನಿಲ್ಲಿಸಿ ಬಂದು ಪಾರ್ಟಿಸಿಪೇಟ್ ಮಾಡಲಿ. ಸಾಕು, ಅವರು ಏನು ತೋರಿಸಿದ್ದಾರೆ ಅವರ ಪ್ರಕಾರ ಅವರು ತೋರಿಸಿದ್ದು ಆಗಿದೆ.

You have exhausted all your possible ways to bring them to the House and make them to participate in the proceedings of the House, it is for the people to judge all these things, either for, For or Against.

ದಯವಿಟ್ಟು ಅವರಿಗೂ ಅಪೀಲ್ ಮಾಡುತ್ತೇನೆ, ನಮ್ಮ ಮಿತ್ರರು ಏನು ಬಾವಿಯಲ್ಲಿದ್ದಾರೆ ತಾವು ದಯವಿಟ್ಟು ತಮ್ಮ ತಮ್ಮ ಪೀಠಗಳಲ್ಲಿ ಕುಳಿತುಕೊಳ್ಳಬೇಕೆಂದು ತಮ್ಮ ಪರವಾಗಿ ನಾನು ಅವರಿಗೂ ಕೂಡ ವಿನಂತಿ ಪೀಠಗಳಲ್ಲಿ ಕುಳಿತುಕೊಳ್ಳಬೇಕೆಂದು ತಮ್ಮ ಪರವಾಗಿ ನಾನು ಅವರಿಗೂ ಕೂಡ ವಿನಂತಿ ಮಾಡುತ್ತಿದ್ದೇನೆ. ದಯವಿಟ್ಟು ನಿಮ್ಮ ನಿಮ್ಮ ಆಸನಗಳಲ್ಲಿ ಕುಳಿತುಕೊಳ್ಳಿ ಮಾನ್ಯ ಸಭಾಧ್ಯಕ್ಷರ ತೀರ್ಪಿಗೆ

ನಾವೆಲ್ಲ ಬದ್ಧರಾಗೋಣ, ಅವರ ತೀರ್ಪಿಗೆ ನಾವು ಬಿಡೋಣ. ದಯವಿಟ್ಟು ಸದನದ ಕಾರ್ಯಕಲಾಪ ಪ್ರಾರಂಭವಾಗಬೇಕು. ಇಲ್ಲವೆಂದರೆ, ಈ ಎರಡು-ಮೂರು ದಿವಸವಾದರೂ ಚೆನ್ನಾಗಿ ನಡೆಯಿತು ಎನ್ನತಕ್ಕ ಮಾತನ್ನು ದಯವಿಟ್ಟು ಅನ್ನಿಸಿಕೊಳ್ಳದಿದ್ದರೆ I think, this leads to something else for the people to have their own opinion. ದಯವಿಟ್ಟು ತಾವು ಅದಕ್ಕೆ ಅವಕಾಶ ಕೊಡದಹಾಗೆ ತಾವೆಲ್ಲರೂ ಕಾರ್ಯಕಲಾಪಗಳಿಗೆ ಅವಕಾಶ ಮಾಡಿಕೊಡುತ್ತೀರಿ ಎಂದು ಹೇಳಿ ನಾನು ನಂಬಿ, ತಮಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ, ನಮಸ್ಕಾರ.

ಅಧ್ಯಕ್ಷರು : ಮಾನ್ಯ ಉಪ ಮುಖ್ಯಮಂತ್ರಿಗಳಾದಿಯಾಗಿ ಶ್ರೀಮಾನ್ ಬಂಗಾರಪ್ಪನವರು ಮತ್ತು ಇತರೆ ಎಲ್ಲಾ ಪಕ್ಷಗಳ ಸದಸ್ಯರುಗಳು ಹೇಳಿದ ಮಾತುಗಳನ್ನು ನಾನು ಕೇಳಿದ್ದೇನೆ. ನಿಮ್ಮ ಭಾವನೆಗಳು ನನಗೆ ಅರ್ಥವಾಗಿದೆ. ಸನ್ಮಾನ್ಯ ಸಭಾನಾಯಕರು ಹೇಳಿದ್ದುದು ಇವತ್ತು ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳಿದ್ದುದು ಮತ್ತು ಮಾನ್ಯ ಬಂಗಾರಪ್ಪನವರು ಹೇಳಿದ್ದುದು ಎಲ್ಲಾ ಮಾತಿನ ಅರ್ಥ ಒಂದೇ. ಎಲ್ಲರನ್ನು ಒಟ್ಟಿಗೆ ತೆಗೆದುಕೊಂಡು ಸದನದ ಕಲಾಪ ನಡೆಸಿದರೆ ಅದಕ್ಕೆ ಹೆಚ್ಚು ಅರ್ಥ ಮತ್ತು ಗೌರವ ಬರುತ್ತದೆಂದು ಹೇಳಿದರು. ಆಗಲಿ ಒಂದು ವೇಳೆ ಅಣ್ಣತಮ್ಮಂದಿರಲ್ಲಿ ಸ್ವಲ್ಪ ವ್ಯತ್ಯಾಸಗಳು ಬರಬಹುದು, ನೀವು ಎಷ್ಟೇ ಉಗ್ರವಾಗಿ ಮಾತನಾಡಿದರೂ ಕೂಡ ತಾಯಿಗೆ ಅಣ್ಣತಮ್ಮಂದಿರೆಲ್ಲ ಒಂದೇ ಆಗಿರುತ್ತಾರೆ. ಆದ್ದಿರಿಂದ ಈ ಸ್ಥಾನಕ್ಕೆ ನಾನು ದೊಡ್ಡವನು ಅಲ್ಲದಿದ್ದರೂ ಕೂಡ ಈ ಸ್ಥಾನಕ್ಕೆ ತಾಯಿತನದ ತಾಳ್ಮೆ ಇರಬೇಕಾಗುತ್ತದೆ. ನಾನು ಇನ್ನೊಂದು ಪ್ರಾಮಾಣಿಕ ಪ್ರಯತ್ನವನ್ನು ಮಾಡತಕ್ಕ ಹಂತದಲ್ಲಿದ್ದೇನೆ. ದಯಮಾಡಿ ನನ್ನ ಜೊತೆಗೆ ತಾವೆಲ್ಲರೂ ಸಹಕರಿಸಬೇಕೆಂದು ಹೇಳಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಈಗ ನಮ್ಮ ಸದಸ್ಯರುಗಳು ಯಾರು ಧರಣಿ ಮಾಡುತ್ತಿದ್ದಾರೆ, ಅವರಲ್ಲಿ ನಾನು ಪ್ರಾರ್ಥನೆ ಮಾಡುತ್ತಿದ್ದೇನೆ. ನಿಮ್ಮ ಭಾವನೆಗಳನ್ನು ಕೂಡ ನಾನು ಗೌರವಿಸಲಿಕ್ಕೆ ಸಿದ್ಧನಿದ್ದೇನೆ. ಇನ್ನೊಂದು ಪ್ರಯತ್ನವನ್ನು ನಾನು ಮಾಡಲಿಕ್ಕೆ ತಾವು ಸಹಕರಿಸಬೇಕು. ತಾವು ತಮ್ಮ ಸ್ವಸ್ಥಾನಗಳಿಗೆ ಹಿಂದಿರುಗಿ. ಈಗ ಸಭೆಯನ್ನು ಮುಂದೂಡಿ ಮತ್ತೆ ಸಭೆ ಪುನಃ 3 ಗಂಟೆಗೆ ಸಮಾವೇಶಗೊಳ್ಳಲಿದೆ.

(ಸಭೆ ಮಧ್ಯಾಹ್ನ 12 ಗಂಟೆ 16 ನಿಮಿಷಗಳಿಗೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆಗೆ ಸಮಾವೇಷಗೊಳ್ಳಲು ನಿಶ್ಚಯಿಸಲಾಯಿತು.)

(ಸದನವು ಪುನಃ 5 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರಾದ ಶ್ರೀ ರಮೇಶ್ ಕುಮಾರ್ ಅವರು ಅಧ್ಯಕ್ಷಸ್ಥಾನದಲ್ಲಿ ಉಪಸ್ಥಿತರಿದ್ದರು.)

ಅಧ್ಯಕ್ಷರು : ಶ್ರೀ ರಾಮರೆಡ್ಡಿಯವರೇ, ಬೇಡಿಕೆಗಳ ಮೇಲೆ ಚರ್ಚೆಯನ್ನು ಮುಂದುವರಿಸಿ.

ವಿತ್ತೀಯ ಕಾರ್ಯಕಲಾಪಗಳು

1995-96ನೇ ಸಾಲಿನ ಬೇಡಿಕೆಗಳ ಮೇಲೆ ಚರ್ಚೆ (ಮುಂದುವರೆದುದು)

+ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಸನ್ಮಾನ್ಯ ಸಭಾಧ್ಯಕ್ಷರೇ, ನಾನು ಮೊನ್ನೆ ಬೇಡಿಕೆಗಳ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡುವಾಗ ವಸತಿ ವಿಷಯದ ಬಗ್ಗೆ ನಾನು ಚರ್ಚೆಯನ್ನು ಪ್ರಾರಂಭ